ಜನಪದ ಸೇವಾ ಟ್ರಸ್ಟ್ ಪ್ರಕಟಣೆ

# ಜನಪದ ವಿಚಾರ

## ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಜೂನ್ ೨೦೦೨ ಸಂಚಿಕೆ ೧೧

ಭಯೋತ್ಪಾದನೆ ಮತ್ತು
ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ
ಯುದ್ಧವೆ ಅಥವಾ ಸಂಧಾನವೆ?

★

ಸ್ವಾತಂತ್ರ್ಯ ಹೋರಾಟಗಾರರಲ್ಲಿ
ರಾಷ್ಟ್ರೀಯತೆ ಹಾಗು ಧಾರ್ಮಿಕತೆ

★

ಸ್ವಾತಂತ್ರ್ಯ, ಚಳುವಳಿಯಲ್ಲಿ ರೈತ

★

ಡಾ|| ಎ.ಪಿ.ಜೆ. ಅಬ್ದುಲ್‌ಕಲಾಂರವರ
ಘಟಿಕೋತ್ಸವ ಭಾಷಣ

★

## ★ ಈ ಸಂಚಿಕೆಯಲ್ಲಿ ★



ಭಯೋತ್ಪಾದನೆ ಮತ್ತು ಕಾಶ್ಮೀರ ಸಮಸ್ಯೆ ಭಾರತದ ರಾಷ್ಟ್ರ ಜೀವನದಲ್ಲಿ ಎರಡು ಮುಳ್ಳುಗಳಾಗಿವೆ. ಕಳೆದ ೫೦ ವರ್ಷಗಳಿಂದ ಈ ದೇಶ ನರಳುತ್ತಿದೆ. ಆದರೆ ಈ ಸಮಸ್ಯೆಗಳ ಪರಿಹಾರ ಮರೀಚಿಕೆಯಾಗಿಯೇ ಉಳಿದಿವೆ. ಈ ಬಿಕ್ಕಟ್ಟಿನ ವಿಷಯದ ವಿಶ್ಲೇಷಣೆ ಮತ್ತು ಸಾಧ್ಯವಿರಬಹುದಾದ ಪರಿಹಾರವನ್ನು ಕುರಿತ ಕೆಲವು ವಿಚಾರಗಳ ಈ ಲೇಖನದಲ್ಲಿವೆ.



ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಹಲವಾರು ನಾಯಕರಲ್ಲಿ ರಾಷ್ಟ್ರೀಯತೆ ಎಷ್ಟರ ಮಟ್ಟಿಗೆ ಇತ್ತು ಮತ್ತು ಧಾರ್ಮಿಕ ಮನೋಭಾವ ಎಷ್ಟರ ಮಟ್ಟಿಗೆ ಇತ್ತು ಎಂಬ ಐತಿಹಾಸಿಕ ಸಂಗತಿಯ ಮೇಲೆ ಈ ಲೇಖನ ಬೆಳಕು ಚೆಲ್ಲುತ್ತದೆ.



ಸ್ವಾತಂತ್ರ್ಯ ಚಳುವಳಿಯಲ್ಲಿ ರೈತನ ಪಾತ್ರ, ಕುರಿತು ಬಹಳ ಅಲ್ಪ ದಾಖಲೆಗಳು ಲಭ್ಯವಿವೆ. ಚಂಪಾರನ್ ಮತ್ತು ಬಾರ್ಡೋಲಿ ರೈತ ಸತ್ಯಾಗ್ರಹದ ಘಟನೆಗಳನ್ನು ಬಿಟ್ಟರೆ, ಬೇರೆ ಪ್ರದೇಶದಲ್ಲಿಯ ರೈತರ ಸ್ವಾತಂತ್ರ್ಯ ಹೋರಾಟದ ಇತಿಹಾಸ ದೊರೆಯುವುದು ದುರ್ಲಭ. ಅಂಥ ಒಂದು ದುರ್ಲಭ ರೈತರ ಹೋರಾಟದ ದಾಖಲೆ ಈ ಲೇಖನದಲ್ಲಿದೆ.



ಯುವ ವಿಜ್ಞಾನಿಗಳಿಗೆ ಮತ್ತು ಯುವ ವಿದ್ಯಾರ್ಥಿಗಳಿಗೆ ಕೆಲ ಮಾರ್ಗದರ್ಶಿ ವಿಚಾರಗಳನ್ನು ದೇಶದ ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ಡಾ|| ಅಬ್ದುಲ್ ಕಲಾಂರವರು ತಮ್ಮ ಘಟಿಕೋತ್ಸವ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ.



ನಮ್ಮ ದೇಶದ ಗ್ರಾಮಗಳು ಪ್ರಾಚೀನ ಕಾಲದಿಂದಲೂ ದೇಶದ ರಾಜಕೀಯ, ಆರ್ಥಿಕ ಏರಿಳಿತಗಳನ್ನು ಏಕಪ್ರಕಾರವಾಗಿ ಎದುರಿಸುತ್ತಾ ಬಂದಿವೆ, ಸಂಭವಿಸಬಹುದಾಗಿದ್ದ ಭಾರತ–ಪಾಕ್ ಯುದ್ಧದ ಸಂದರ್ಭದಲ್ಲಿ ಗ್ರಾಮಗಳು ನಿರ್ವಹಿಸಬೇಕಾಗಿದ್ದ ಪಾತ್ರದ ಬಗ್ಗೆ ಈ ಲೇಖನದಲ್ಲಿ ಚಿಂತಿಸಲಾಗಿದೆ.

# ಜನಪದ ವಿಚಾರ

**ವೈಚಾರಿಕ ತಿಂಗಳ ಡೈಜೆಸ್ಟ್**

ಸಂಪುಟ: ೨ ಸಂಚಿಕೆ: ೧೧

ಜೂನ್ ೨೦೦೨

ಸಂಪಾದಕ

**ಸುರೇಂದ್ರ ಕೌಲಗಿ**





**ಚಂದಾ ವಿವರ :**

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

**ಸಂಪರ್ಕ ವಿಳಾಸ :**

ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧
ದೂರವಾಣಿ :
೦೮೨೩೬-೬೪೮೬೬೪


## ಇಳಿಯುವ ದಿನ ಬಂದಿದೆ

ಗದ್ದುಗೆಯಿಂದ ಇಳಿದು ಬಾರಯ್ಯಾ ಅಣ್ಣಾ,
ಇಳಿಯುವ ದಿನ ಬಂದಿದೆ
ನನ್ನೊಡಲ ಬಡ ಬಾನಲ ಧಗ ಧಗ
ಉರಿಯುವಾಗ ಗದ್ದುಗೆಯ ಮೇಲೆ
ನಿನ್ನದೇನು ದರ್ಬಾರು?
ಸೂರ್ಯ ಬೆಳಕು ಬೀರುತ್ತಾನೆ
ನನ್ನ ಮೇಲೂ
ಮಂದಾನಿಲ ಸುಗಂಧ ತೀಡುತ್ತಾನೆ.
ತಾಯಿ ಗಂಗೆಗೆ ನಾನೂ ಮಗುವೇ
ನನ್ನ ಕೊಳೆಯನ್ನೂ ತೊಳೆಯುತ್ತಾಳೆ
ನಿನಿಗೆ ಇವೆಲ್ಲ ಗೊತ್ತಿಲ್ಲ ಅಲ್ಲವೇ?
ಗೊತ್ತಿದ್ದರೆ ನಾ ನಿನಗೆ ಕಾಲ್ಚೆಂಡಾಗಿ
ಪಾತಾಳಕ್ಕೆ ಉರುಳಬೇಕಾಗಿರಲಿಲ್ಲ
ಏರಿಸಿದೆವು ಎತ್ತರಕ್ಕೆ ನಿನ್ನ
ನಮ್ಮೆಲ್ಲ ಉದ್ಧಾರಕ್ಕೆ ಉಬ್ಬಿಉಬ್ಬಿ
ಮೇಲಕ್ಕೆ, ಏರಿದೆ ಕೊಬ್ಬಿದೆ ಬಂದ
ದಾರಿಯನು ಒಮ್ಮೆಯಾದರೂ ಹಿಂತಿರುಗಿ
ನೋಡಿದೆಯಾ? ನಿನ್ನ ಏರಿಸಲು ಕೈ ಮೈ
ಮಣ್ಣು ಮಾಡಿಕೊಂಡವರನ್ನು ನೆನೆದೆಯಾ?
ನಿನ್ನದಲ್ಲ ಗದ್ದುಗೆ
ಸಿದ್ಧನಾಗು ಗುದ್ದಿಗೆ
ಗದ್ದುಗೆಯಿಂದ ಇಳಿದು ಬಾರಯ್ಯಾ
ಅಣ್ಣಾ,
ಇಳಿಯುವ ದಿನ ಬಂದಿದೆ

– ಎಲ್. ಗಿರಿಜಾರಾಜ್

## ವಿಚಾರ ದೀಪ್ತಿ......................

ನಮ್ಮ ಸಮಾಜದಲ್ಲಿ ಮಾನವ ತನ್ನ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದಾನೆ. ಆದರೆ ಆ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಸುಖ ಜೀವನ ನಡೆಸಬಹುದು. ಇಲ್ಲವಾದರೆ ಜಂಜಾಟಗಳ ನಡುವೆ ಸಿಲುಕಿ ಜೀವನವನ್ನು ಸಾಗಿಸುವುದೇ ಕಷ್ಟವಾಗುತ್ತದೆ. ಆದುದರಿಂದ ಮಾನವನ ಮೌಲ್ಯಗಳತ್ತ ಅವಲೋಕಿಸೋಣ.

ಮಾನವೀಯ ಮೌಲ್ಯಗಳನ್ನು ೮ ಭಾಗಗಳಾಗಿ ವಿಭಾಗಿಸಬಹುದು. ೧. ಬದುಕುವ ಕಲೆ. ೨. ಉತ್ಸಾಹದ ಕಲೆ, ೩. ನಾಯಕತ್ವದ ಕಲೆ, ೪. ಯೋಚಿಸುವ ಕಲೆ, ೫. ಮಾತಿನ ಕಲೆ, ೬. ಕಲಿಯುವ ಕಲೆ, ೭. ಸಂತೋಷದ ಕಲೆ. ೮. ಗುಣಗಳನ್ನು ವೃದ್ಧಿಸುವ ಕಲೆ

ಬದುಕುವ ಕಲೆ : ಮಾನವನು ಬದುಕುವ ಕಲೆಯನ್ನು ಮೊದಲು ಕಲಿತಿರಬೇಕು. ಉತ್ತಮ ಸ್ನೇಹಿತರನ್ನು ಸಂಪಾದಿಸುವ ಕಲೆಯನ್ನು ರೂಢಿಸಿಕೊಂಡಿರಬೇಕು. ಅದೇ ರೀತಿ ಪ್ರಾಮಾಣಿಕತೆಯಿಂದ ಬದುಕುವ ರೀತಿ ಅರಿತಿರಬೇಕು ಕೆಲಸಕ್ಕೆ ಬಾರದ ವಿಷಯದ ಬಗ್ಗೆ ಚರ್ಚೆ ಬಿಡಬೇಕು. ಬೇರೆಯವರ ಒಳ್ಳೆಯ ಗುಣಗಳನ್ನು ಅಳವಡಿಸಿಕೊಳ್ಳುವತ್ತ ಗಮನ ಹರಿಸಬೇಕು. ಇದು ಬದುಕುವ ಕಲೆಯಾಗಿರುತ್ತದೆ.

ಉತ್ಸಾಹದಿಂದಿರುವ ಕಲೆ : ಆಲಸ್ಯವನ್ನು ತೊರೆದು ಯಾವಾಗಲೂ ಚಟುವಟಿಕೆಯಿಂದ ಕೂಡಿದ್ದರೆ ಜೀವನ ಉತ್ಸಾಹಭರಿತವಾಗುತ್ತದೆ, ಕೆಟ್ಟ ಚಟಗಳಿಗೆ ಬಲಿಯಾಗಬಾರದು. ಶಿಸ್ತಿನಿಂದ ವರ್ತಿಸುವುದು ಸಹ ಒಂದು ಕಲೆಯಾಗಿರುತ್ತದೆ.

ನಾಯಕತ್ವದ ಕಲೆ : ಇದರಲ್ಲಿ ಮುಖ್ಯವಾಗಿ ನುಡಿದಂತೆ ನಡೆಯುವ ಕಲೆಯನ್ನು ಮೊದಲು ಉಳಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ಜವಾಬ್ದಾರಿಗಳನ್ನು ಅರಿತು ನಡೆಯಬೇಕಾಗುತ್ತದೆ. ಬೇರೆಯವರ ಶಕ್ತಿಯನ್ನು ಗುರುತಿಸಬೇಕು. ಅವರಿಗೆ ಪ್ರೋತ್ಸಾಹ ನೀಡುವುದು ನಾಯಕತ್ವದ ಗುಣವಾಗಿದೆ.

ಮಾತಿನ ಕಲೆ : ಕಡಿಮೆ ಮಾತನಾಡುವುದನ್ನು ಮೊದಲು ಕಲಿತಿರಬೇಕು. ನಿಧಾನವಾಗಿ ಮಧುರವಾಗಿ ಬೇರೆಯವರಿಗೆ ಅರ್ಥವಾಗುವಂತೆ ಮಾತನಾಡಬೇಕು. ಅದೇ ರೀತಿ ಮಾತನ್ನು ಕೇಳುವ ವ್ಯವಧಾನವನ್ನು ಅರಿತಿರಬೇಕು. ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬ ಗಾದೆಯಂತೆ ಮಾತು ಇರಬೇಕು.

ಕಲಿಯುವ ಕಲೆ : ಯಾವಾಗಲೂ ವಿದ್ಯಾರ್ಥಿಯಾಗಿರುವುದು ಹಾಗೂ ಸದಾ ಎಚ್ಚರದಿಂದ ಇರುವುದು. ಸದಾ ಎಚ್ಚರದಿಂದಿರದ ವ್ಯಕ್ತಿ ಏನನ್ನೂ ಸಾಧಿಸಲಾರ ಎಂಬ ನುಡಿಯಂತೆ ಜೀವನದಲ್ಲಿ ಎಚ್ಚರ ಅಗತ್ಯ. ಓದುವಾಗ ಸರಿಯಾಗಿ ಕ್ರಮಬದ್ಧವಾಗಿ ಓದುವುದು ಹಾಗೂ ಅದನ್ನು ಮೆಲುಕು ಹಾಕುವುದನ್ನು ಸಹ ಕಲಿತಿರಬೇಕು. ಇಲ್ಲದಿದ್ದರೆ ಉಪಯೋಗವಿಲ್ಲ.

– ಆ. ಮೃತ್ಯುಂಜಯ

# ಭಯೋತ್ಪಾದನೆ ಮತ್ತು ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಯುದ್ಧವೇ ಅಥವಾ ಸಂಧಾನವೇ?

– ಸುರೇಂದ್ರ ಕೌಲಗಿ

**ಭಾ**ರತ ಎದುರಿಸುತ್ತಿರುವ ಭಯೋತ್ಪಾದನೆಗೆ ಹನ್ನೆರಡು ವರ್ಷಗಳ ಇತಿಹಾಸವಿದೆ, ಕಾಶ್ಮೀರ ಸಮಸ್ಯೆಗೆ ಐವತ್ತು ವರ್ಷಗಳ ಇತಿಹಾಸವಿದೆ. ಇವೆರಡು ಸಮಸ್ಯೆಗಳ ಕಾರಣದಿಂದ ಭಾರತ ಇದುವರೆಗೆ ಅಪಾರವಾದ ಪ್ರಾಣಹಾನಿ, ಆಸ್ತಿ ಹಾನಿಯನ್ನು ಅನುಭವಿಸಿದೆ. ಇವೆರಡು ಪ್ರಕಾರದ ಹಾನಿಯ ಲೆಕ್ಕವನ್ನು ಹಾಕಲು ಸಾಧ್ಯವಿಲ್ಲ. ಅಷ್ಟು ದೊಡ್ಡ ಪ್ರಮಾಣದ ಹಾನಿ ಆದಾಗಿದೆ. ಅಲ್ಲದೆ, ಈ ಸಮಸ್ಯೆಗಳ ತೀವ್ರತೆ ದಿನೇದಿನೇ ಹೆಚ್ಚಾಗುತ್ತಿದೆಯೇ ವಿನಃ ಕಡಿಮೆಯಾಗುತ್ತಿಲ್ಲ. ಆದ್ದರಿಂದ ಇನ್ನೂ ಬಹಳಷ್ಟು ಪ್ರಾಣಹಾನಿ ಮತ್ತು ಆಸ್ತಿಹಾನಿ ಆಗುವ ಸಾಧ್ಯತೆಗಳಿವೆ. ಈಗ ಈ ಸಮಸ್ಯೆಗಳ ಪರಿಹಾರಕ್ಕಾಗಿ ನಿರ್ಣಾಯಕವಾದ ಕ್ರಮಕೈಗೊಳ್ಳಬೇಕಾದ ಕಾಲ ಒದಗಿದೆ. ಭಾರತದ ಸಹನೆಯ ಕಟ್ಟೆ ಒಡೆದಿದೆ. ಈ ಸಮಸ್ಯೆಗಳನ್ನು ಶಾಂತ ರೀತಿಯಲ್ಲಿ ಬಗೆ ಹರಿಸಿಕೊಳ್ಳಬೇಕೆಂಬ ಭಾರತದ ಇದುವರೆಗಿನ ಪ್ರಯತ್ನ ಫಲಪ್ರದವಾಗಿಲ್ಲ. ಸಂಯುಕ್ತ ರಾಷ್ಟ್ರ ಸಂಘವಾಗಲೀ, ಅಂತರ್‌ರಾಷ್ಟ್ರೀಯ ದೇಶಗಳ ಸಮೂಹವಾಗಲೀ ಈ ಸಮಸ್ಯೆಗಳನ್ನು ಬಗೆಹರಿಸಿಕೊಡುವಲ್ಲಿ ವಿಫಲವಾಗಿವೆ. ಈ ಕಾರಣದಿಂದಾಗಿ ಈ ಸಮಸ್ಯೆಗಳು ಪರಿಹಾರ ಕಾಣದೆ ಅಂತಿಮ ಘಟ್ಟವನ್ನು ತಲುಪಿವೆ. ಆದ್ದರಿಂದಲೇ ಭಾರತ ಈ ಸಮಸ್ಯೆಗಳ ಪರಿಹಾರಕ್ಕೆ ಯುದ್ಧದ ಮಾರ್ಗವನ್ನು ಕೈಗೊಳ್ಳುವ ಬಗ್ಗೆ ಆಲೋಚಿಸುತ್ತಿದೆ. ಆದರೆ ತೀರ್ಮಾನಕೈಗೊಳ್ಳುವುದು ಕಷ್ಟದ ಕೆಲಸವಾಗಿದೆ ಏಕೆಂದರೆ ಇಂದಿನ ಕಾಲದ ಯುದ್ಧಗಳು ಪರಮಾಣು ಅಸ್ತ್ರಗಳಿಂದ ಕೂಡಿದವುಗಳಾಗಿರುತ್ತವೆ. ಇಂಥ ಯುದ್ಧಗಳಲ್ಲಿ ಗೆದ್ದವರು ಮತ್ತು ಸೋತವರು ಎಂಬ ನಿರ್ಣಯವೇ ಇರುವುದಿಲ್ಲ. ಎರಡು ಪಕ್ಷಗಳಿಗೂ ಅಪಾರವಾದ ಪ್ರಾಣಹಾನಿ, ಆಸ್ತಿ ಹಾನಿಯಾಗಿರುತ್ತದೆ, ಸಾಮಾಜಿಕ ಕ್ಷೋಭೆಯಾಗಿರುತ್ತದೆ, ಆರ್ಥಿಕ ಅವನತಿಯಾಗಿರುತ್ತದೆ. ಅಲ್ಲದೆ, ವಿಶ್ವವ್ಯಾಪಿ ಯುದ್ಧವಾಗುವ ಅಪಾಯವಿರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಭಾರತ–ಪಾಕ್ ಯುದ್ಧ ನಡೆದರೆ ಎರಡೂ ಕಡೆಯಿಂದ ಒಂದು ಕೋಟಿಗೂ ಹೆಚ್ಚು ಜನ ಸಾಯುವ ಸಾಧ್ಯತೆಯಿದೆ. ಕಾಶ್ಮೀರ ಮತ್ತು ಭಯೋತ್ಪಾದನೆಯ ಕಾರಣಗಳಿಂದ ಇದುವರೆಗೆ ಈ ಎರಡೂ ದೇಶಗಳ ಮಧ್ಯ ಮೂರು ಯುದ್ಧಗಳಾಗಿವೆ. ಆದರೆ ಸಮಸ್ಯೆಗಳು ಪರಿಹಾರಗೊಳ್ಳದೆ ಯಥಾ ಸ್ಥಿತಿಯಲ್ಲೇ ಉಳಿದಿವೆ. ಅಷ್ಟೇ ಅಲ್ಲ, ಎರಡು ದೇಶಗಳ ಮಧ್ಯ ವೈಮನಸ್ಸು ಹೆಚ್ಚಾಗಲೂ ಸಹ ಕಾರಣವಾಗಿದೆ. ಮತ್ತು ಅಮೇರಿಕದಂಥ ದೇಶಗಳು ಭಾರತ ಉಪಖಂಡದಲ್ಲಿ

ತಮ್ಮ ನೆಲೆಗಳನ್ನು ಭದ್ರಪಡಿಸಿಕೊಳ್ಳಲು ಕಾರಣವಾಗಿದೆ. ಭಯೋತ್ಪಾದನೆ ಇಂದು ವಿಶ್ವದಾದ್ಯಂತ ಹರಡಿದೆ ಮತ್ತು ಸೂಕ್ಷ್ಮಾತಿ ಸೂಕ್ಷ್ಮವಾಗಿ ಕೆಲಸ ಮಾಡುತ್ತಿದೆ. ಆದ್ದರಿಂದ ಭಯೋತ್ಪಾದನೆಯ ವಿರುದ್ಧ ಸಮರ ಸಾರುವುದೆಂದರೆ ಅದೊಂದು ದೀರ್ಘಕಾಲೀನ ಮತ್ತು ಅತಿ ಪ್ರಯಾಸಕರ ಕೆಲಸವಾಗುತ್ತದೆ, ಕಳೆದ ಸೆಪ್ಟೆಂಬರ್ ೧೧ ರೊಂದು ಅಮೇರಿಕಾದಲ್ಲಿಯ ವಿಶ್ವವಾಣಿಜ್ಯ ಸಂಸ್ಥೆಯ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ಮೇಲೆ ಅಮೇರಿಕ ಪ್ರಪಂಚದಾದ್ಯಂತ ಭಯೋತ್ಪಾದಕರ ಮೇಲೆ ಯುದ್ಧ ಸಾರಿತು; ಅಫ್‌ಘಾನಿಸ್ಥಾನದಲ್ಲಿರುವ ಆಲಕಾಯದಾ ಮತ್ತು ಬಿನ್ ಲಾಡೇನ್‌ಗೆ ಸೇರಿದ ಭಯೋತ್ಪಾದಕರ ಮೇಲೆ ಅಮೇರಿಕಾ ದಾಳಿ ನಡೆಸಿತು. ಆದರೆ ಎಂಟು ತಿಂಗಳಾದರೂ ಬಿನ್ ಲಾಡೆನ್‌ನ್ನು ವಶಪಡಿಸಿಕೊಳ್ಳಲು ಅಮೇರಿಕಾಕ್ಕೆ ಸಾಧ್ಯವಾಗಿಲ್ಲ. ಪಾಕಿಸ್ತಾನದಲ್ಲಿ ಮತ್ತು ಆದು ಆಕ್ರಮಿಸಿರುವ ಕಾಶ್ಮೀರದಲ್ಲಿ ಭಯೋತ್ಪಾದಕರ ತರಬೇತಿ ಶಿಬಿರಗಳಿವೆ. ಭಯೋತ್ಪಾದಕತೆಯ ವಿರುದ್ಧ ಸಮರ ಸಾರಿದಲ್ಲಿ ಭಾರತದ ಪಡೆ ಅನಿವಾರ್ಯ ವಾಗಿ ಪಾಕಿಸ್ಥಾನದೊಳಗೆ ಹೋಗಲೇ ಬೇಕಾಗುತ್ತದೆ. ಅಧ್ಯಕ್ಷ ಪರ್ವೇಜ್ ಮುಷರ್ರಫ್ ಸ್ವತಃ ಮಿಲಿಟರಿ ಅಧಿಕಾರಿಯಾಗಿರುತ್ತಾರೆ. ಆದ್ದರಿಂದ ಅವರಿಗೆ ಯುದ್ಧವೆಂದರೆ ಒಂದು ಸಹಜ ಕ್ರಿಯೆ ಅನಿಸುತ್ತದೆ. ಆದರೆ ಭಾರತದ ಪರಿಸ್ಥಿತಿ ಹಾಗಿಲ್ಲ ಇಲ್ಲಿ ಪ್ರಜಾತಂತ್ರ ವ್ಯವಸ್ಥೆಯಿದೆ; ಸಂವಿಧಾನವಿದೆ. ಇಲ್ಲಿಯ ಸರ್ಕಾರ ಸರ್ವಾಧಿಕಾರಿಯಂತೆ ವರ್ತಿಸಲು ಸಾಧ್ಯವಿಲ್ಲ.

ಪಾಕಿಸ್ತಾನದ ಜೊತೆ ಸಿಮ್ಲಾ, ಲಾಹೋರ್, ದಿಲ್ಲಿ ಆಗ್ರಾ ಮುಂತಾದಕಡೆಯೆಲ್ಲ ಮಾತುಕತೆಗಳಾಗಿವೆ; ಸಿಮ್ಲಾದಲ್ಲಿ ಒಪ್ಪಂದವೇ ಆಗಿದೆ. ಆದರೆ ಪಾಕಿಸ್ಥಾನದಲ್ಲಿ ದಲ್ಲಿ ಮಿಲಿಟರಿ ಸರ್ಕಾರಗಳು ಇರುವುದರಿಂದ ಯಾವ ಒಪ್ಪಂದವಾಗಲೀ, ವಚನಗಳಾಗಲೀ ಜಾರಿಗೆ ಬರಲು ಸಾಧ್ಯವಾಗುತ್ತಿಲ್ಲ. ಪಾಕಿಸ್ಥಾನದ ಜೊತೆಗೆ ಮಾತುಕತೆಯೆಂದರೆ ಕಲ್ಲು ಬಂಡೆಯೊಂದಿಗಿನ ಮಾತುಕತೆಯಂತಾಗಿದೆ. ಎಲ್ಲಿಯ ವರೆಗೆ ಪಾಕಿಸ್ತಾನದಲ್ಲಿ ಪ್ರಜಾತಾಂತ್ರಿಕ ಸರ್ಕಾರದ ಸ್ಥಾಪನೆಯಾಗುವುದಿಲ್ಲವೋ ಅಲ್ಲಿಯವರೆಗೆ ಪಾಕಿಸ್ತಾನದೊಂದಿಗೆ ಯಾವುದೇ ಗೌರವಯುತ ಸಂಧಾನವಾಗು ವುದು ಸನಿಹ ಭವಿಷ್ಯದಲ್ಲಂತೂ ಸಾಧ್ಯವಿಲ್ಲ. ಇನ್ನೊಂದು ಮೂಲಭೂತವಾದಿ ದೇಶವಾದ ಇರಾಕ್‌ನಲ್ಲಿ ಕೂಡ ಸದ್ದಾಂ ಹುಸೇನ್‌ನಂಥ ಸರ್ವಾಧಿಕಾರಿ ಇರುವುದ ರಿಂದ ಇರಾಕ್ ಜೊತೆ ಸಹ ಯಾವುದೇ ಮಾತುಕತೆ ಅಥವಾ ಸಂಧಾನ ಮಾಡಿಕೊಳ್ಳಲು ಅಮೇರಿಕಕ್ಕೆ ಸಾಧ್ಯವಿಲ್ಲವಾಗಿದೆ.

ಭಾರತವು ಗಡಿಯಾಚಗಿನ ಭಯೋತ್ಪಾದಕತೆಯನ್ನು ತಡೆಯಲು ಎಲ್ಲ ರಾಜತಾಂತ್ರಿಕ ಒತ್ತಡವನ್ನೂ ಪಾಕಿಸ್ತಾನದ ದೋಲೆ ತರುತ್ತಿದೆ. ಇನ್ನು ಮುಂದೆ ಭಯೋತ್ಪಾದಕತೆಯನ್ನು ತಡೆಯಲು ಸಾಧ್ಯವಿಲ್ಲ, ಸಹನೆ ಮೀರಿದೆ ಎಂದು

ಇಡೀ ವಿಶ್ವಕ್ಕೆ ಭಾರತ ಸಾರುತ್ತಿದೆ. ವಿಶ್ವ ರಾಷ್ಟ್ರ ಸಂಸ್ಥೆಯೂ ವಿಫಲಗೊಂಡಿದೆ. ಪರಿಸ್ಥಿತಿ ಹೀಗಿರುವಾಗ ಪ್ರಪಂಚದಲ್ಲಿರುವ ಇತರೆ ದೇಶಗಳೊಡನೆ ಭಾರತ ಭಯೋತ್ಪಾದಕತೆಯ ವಿರುದ್ಧ ಸಂಘಟನೆ ಮಾಡಿಕೊಂಡು ಸಮರ ಸಾರಬೇಕು. ಅಮೇರಿಕಾ, ಬ್ರಿಟನ್, ರಶಿಯಾ, ಜರ್ಮನಿ ಮುಂತಾದ ದೇಶಗಳು ಈಗಾಗಲೇ ಭಯೋತ್ಪಾದನೆಯ ವಿರುದ್ಧ ಸಮರ ಸಾರಲು ಮುಂದೆ ಬಂದಿವೆ. ಅವು ಕೂಡ ಭಾರತದ ನೆರವಿಗೆ ಬರುತ್ತವೆ: ನಂತರ ಸಂಯುಕ್ತ ರಾಷ್ಟ್ರ ಸಂಘವೂ ಈ ಸಮರದಲ್ಲಿ ತನ್ನ ಪಾಲಿನ ಪಾತ್ರವನ್ನು ನಿರ್ವಹಿಸಬಹುದು. ಆದ್ದರಿಂದ ಭಾರತ ಧೈರ್ಯ ಮತ್ತು ದೃಢ ನಿಶ್ಚಯದೊಂದಿಗೆ ಭಯೋತ್ಪಾದನೆಯ ವಿರುದ್ಧ ನಿರ್ಣಾಯಕ ಸಮರ ಸಾರಬೇಕು. ಯುದ್ಧದಿಂದ ಅನೇಕ ದುಷ್ಪರಿಣಾಮಗಳು ಆಗುತ್ತವೇನೋ ನಿಜ. ಈಗಾಗಲೆ ನಮ್ಮ ಮುಂದೆ ಎರಡು ಮಹಾ ಯುದ್ಧಗಳ ಪರಿಣಾಮ ಇದ್ದೇ ಇದೆ. ಆದರೆ ಪ್ರಪಂಚದ ಇತಿಹಾಸದಲ್ಲಿ ಅನಿವಾರ್ಯ ಯುದ್ಧಗಳ ಉದಾಹರಣೆಗಳೂ ಇವೆ. ನಮ್ಮ ಭಾರತದ ಮಟ್ಟಿಗೆ ಹೇಳುವುದಾದರೆ ಮಹಾಭಾರತ ಯುದ್ಧದ ಉದಾಹರಣೆ ಇದೆ. ಯುದ್ಧ ಮಾಡುವುದು ಕೆಲವೊಂದು ಸಂದರ್ಭದಲ್ಲಿ ಧರ್ಮವಾಗುತ್ತದೆ. ಯುದ್ಧ, ಧರ್ಮವಾಗುವಂಥ ಕಾಲ ಈಗ ಅನಿವಾರ್ಯವಾಗಿ ಭಾರತದ ಬಾಗಿಲಿಗೆ ಬಂದಿದೆ. ಬಹುಶಃ ಭಾರತ ಇಂದಿನ ಯುದ್ಧದ ಅನಿವಾರ್ಯತೆಯ ಪರಿಸ್ಥಿತಿಯಿಂದ ವಿಮುಖವಾಗಲು ಸಾಧ್ಯವಿಲ್ಲವೆಂದು ಅನಿಸುತ್ತದೆ. ಇಲ್ಲಿ ಒಂದು ಮುಖ್ಯ ಅಂಶವನ್ನು ನಾವು ಗಮನಿಸಬೇಕು ಭಾರತದ ಉದ್ದೇಶಿ ಯುದ್ಧವು ಯಾವುದೇ ಪರದೇಶವನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ಇರದೆ ಅಂತರ್ ರಾಷ್ಟ್ರೀಯ ಸಮಸ್ಯೆಯಾದ ಭಯೋತ್ಪಾದನೆಯ ವಿರುದ್ಧ ಪ್ರಪಂಚದ ಇತರ ರಾಷ್ಟ್ರಗಳೊಂದಿಗೆ ಸೇರಿಕೊಂಡು ನಡೆಸುವ ಯುದ್ಧ ಇದಾಗಿರುವುದರಿಂದ ಭಾರತದ ಉದ್ದೇಶ್ಯವನ್ನು ಯಾರೂ ತಪ್ಪಾಗಿ ಭಾವಿಸಲು ಸಾಧ್ಯವಿಲ್ಲ. ಆದ್ದರಿಂದ ಭಾರತ ಪಾಕಿಸ್ಥಾನಕ್ಕೆ ಅಂತಿಮ ಗಡುವು ಕೊಟ್ಟು ಯುದ್ಧ ಸಾರುವ ಬಗ್ಗೆ ತೀರ್ಮಾನಕೈಗೊಳ್ಳಬೇಕು. ಭಾರತ ಅಹಿಂಸೆಯಲ್ಲಿ ನಂಬಿಕೆ ಇಟ್ಟಿರುವ ದೇಶವಾಗಿದೆ. ಯುದ್ಧ ಸಾರವುದು ಆದರ ಸ್ವಧರ್ಮಕ್ಕೆ ವಿರೋಧವಾಗಿದೆ. ಆದರೆ ಸ್ವಧರ್ಮವು ನಕಾರಾತ್ಮಕ ದೃಷ್ಟಿ ಕೋನವನ್ನು ಹೊಂದಿರುವುದಿಲ್ಲ ಆದ್ದರಿಂದಲೇ ಅಹಿಂಸಾ ವಿಚಾರದ ಸಾಕಾರ ಮೂರ್ತಿಯಾಗಿದ್ದ ಗಾಂಧೀಜಿ ಎಂದೂ ಹಿಂಸಾವಾದಿಗಳಿಗೆ ಹೆದರಿಕೊಂಡಿರಲಿಲ್ಲ. ಹಿಂಸಾವಾದಿಗಳ ಮನಃಪರಿವರ್ತನೆಗಾಗಿ ಪ್ರಯತ್ನಿಸಿದರು. ಈ ಕಾರ್ಯದಲ್ಲಿ, ಹೇಡಿಯ ಅಹಿಂಸೆಗಿಂತ ವೀರೋಚಿತ ಹಿಂಸೆ ಮೇಲು ಎಂದು ಸಾರಿದರು. ಈಗ ಭಾರತ ಕೈಗೊಳ್ಳಲು ಆಲೋಚಿಸುತ್ತಿರುವ ಯುದ್ಧವು ಅಹಿಂಸಾ ಧರ್ಮಕ್ಕೆ ವಿರೋಧವಾಗಿದೆಯೆಂದು ಅನಿಸುವುದಿಲ್ಲ.

ಇನ್ನು ಕಾಶ್ಮೀರ ಸಮಸ್ಯೆಗೆ ಇರಬಹುದಾದ ಪರಿಹಾರವನ್ನು ಕುರಿತು ಆಲೋಚಿಸೋಣ. ಕಾಶ್ಮೀರ ಸಮಸ್ಯೆಗೆ ತನ್ನದೇ ಆದ ದೀರ್ಘ ಇತಿಹಾಸವಿದೆ. ಪ್ರಪಂಚದ ಇತರ ಹಲವಾರು ಜಟಿಲ ಸಮಸ್ಯೆಗಳಲ್ಲಿ ಕಾಶ್ಮೀರ ಸಮಸ್ಯೆಯೂ ಒಂದು. ಇದರ ಪರಿಹಾರಕ್ಕಾಗಿ ನಡೆದ ಮಾತುಕತೆಗಳು ವಿಫಲವಾಗಿವೆ; ಯುದ್ಧಗಳೂ ವಿಫಲವಾಗಿವೆ; ಮೂರನೇ ರಾಷ್ಟ್ರದ ಸಂಧಾನಕ್ಕೆ ಅಲ್ಲಿ ಅವಕಾಶ ಇಲ್ಲವಾಗಿದೆ; ಸಂಯುಕ್ತ ರಾಷ್ಟ್ರ ಸಂಘವು ಕೈಚಾಚಿಕೂತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳು, ಅದರಲ್ಲಿ ಮುಖ್ಯವಾಗಿ ಅಮೇರಿಕ ಸಂಯುಕ್ತ ಸಂಸ್ಥಾನ ಕಾಶ್ಮೀರದ ಕದಡಿದ ನೀರಲ್ಲಿ ಮೀನು ಹಿಡಿಯಲು ಪ್ರಯತ್ನಿಸುತ್ತಿದೆಯೇ ಹೊರತು ಸಮಸ್ಯೆಯ ಪರಿಹಾರಕ್ಕೆ ಶ್ರದ್ಧಾಯುತ ಪ್ರಯತ್ನವನ್ನೇ ಮಾಡುತ್ತಿಲ್ಲ. ಅಲ್ಲದೆ, ಈ ವಿವಾದದ ವಿಷಯದಲ್ಲಿ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂಬ ನೀತಿಯನ್ನೂ ಅನುಸರಿಸುತ್ತ ಬಂದಿವೆ. ಅಷ್ಟೇ ಅಲ್ಲ ಪಾಕಿಸ್ತಾನವನ್ನು ಒಂದು ಭಯೋತ್ಪಾದಕ ದೇಶವನ್ನಾಗಿಯೂ ಬೆಳೆಸಿವೆ; ಮಾರಕ ಶಸ್ತ್ರಾಸ್ತ್ರಗಳನ್ನೂ ಸರಬರಾಜು ಮಾಡಿ ಆ ಸಮಸ್ಯೆಯನ್ನು ಇನ್ನಷ್ಟು ಕ್ಲಿಷ್ಟವಾಗಿಯೂ, ಬೃಹತ್ತಾಗಿಯೂ ಮಾಡಲು ಒಯ್ಯುತ್ತಿವೆ. ಮುಷ್ರಫ್ ಅಧಿಕಾರದಲ್ಲಿ ಮುಂದುವರಿಯ ಬೇಕಾದರೆ, ಮತ್ತು ತನ್ನ ಶತ್ರುಗಳ ಕೈ ಮೇಲಾಗಾ ಬಾರದೆಂದಾದರೆ ಕಾಶ್ಮೀರ ಒಂದು ಸಮಸ್ಯೆಯಾಗಿ ಮುಂದುವರಿಯಬೇಕೆಂಬುದೇ ಮುಷ್ರಫನ ನೀತಿಯಾಗಿದೆ. ಅಲ್ಲದೇ ಕಾಶ್ಮೀರದ ಒಂದು ಭಾಗವನ್ನ "ಸ್ವತಂತ್ರ ಕಾಶ್ಮೀರ" ಎಂಬ ಹೆಸರಿನಲ್ಲಿ ಆಕ್ರಮಿಸಿಕೊಳ್ಳಲಾಗಿದೆ. ಈ ಆಕ್ರಮಿತ ಕಾಶ್ಮೀರದಲ್ಲಿ ಭಯೋತ್ಪಾದಕರನ್ನು ತಯಾರಿಸುವ ನೆಲೆಗಳನ್ನು ಸ್ಥಾಪಿಸಲಾಗಿದೆ ಮತ್ತು ಈ ಭಯೋತ್ಪಾದಕರನ್ನು "ಸ್ವಾತಂತ್ರ್ಯ ಯೋಧ"ರೆಂದು ಕರೆದು ಅವರನ್ನು ಕಾಶ್ಮೀರದಲ್ಲಿ ಕಳುಹಿಸಲಾಗುತ್ತಿದೆ.

ಇದು ಇದುವರೆಗಿನ ಕಾಶ್ಮೀರ ಕುರಿತಾದ ಸ್ಥೂಲ ಪರಿಸ್ಥಿತಿ. ಇಂಥ ಸಮಸ್ಯೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ಕಾಶ್ಮೀರ ವಿವಾದವನ್ನು ಬಗೆ ಹರಿಸುವುದೆಂತು?

ಭಾರತ ಇದುವರೆಗೆ ತಳೆದಿರುವ ನೀತಿಯ ಪ್ರಕಾರ ಕಾಶ್ಮೀರ ಭಾರತದ ಒಂದು ಅವಿಭಾಜ್ಯ ಅಂಗ; ಪಾಕಿಸ್ಥಾನದ ನೀತಿಯ ಪ್ರಕಾರ ಪ್ರತಿಯೊಬ್ಬ ಪಾಕಿಸ್ಥಾನಿಯಲ್ಲಿ ಕಾಶ್ಮೀರದ ರಕ್ತ ಹರಿಯುತ್ತಿದೆ. ಹೀಗೆ ಭಾರತ ಮತ್ತು ಪಾಕಿಸ್ತಾನ ಎರಡೂ ಈ ವಿಷಯವನ್ನು ಪ್ರತಿಷ್ಠೆಯ ವಿಷಯವನ್ನಾಗಿಸಿಕೊಂಡಿವೆ. ಹೀಗೆ ಕಾಶ್ಮೀರ ಸಮಸ್ಯೆ ಬಗೆಹರಿಯಲಾಗದ ಗಂಟಾಗಿದೆ.

ಭಯೋತ್ಪಾದನೆಯ ವಿರುದ್ಧ ಸಮರ ಸಾರುವ ರೀತಿಯಲ್ಲಿ ಕಾಶ್ಮೀರದ ಸಮಸ್ಯೆಗೆ ಸಮರ ಪರಿಹಾರವಾಗಲಾರದು. ಈ ಸಮಸ್ಯೆಯನ್ನು ವಿಶಿಷ್ಟ ರೀತಿಯಲ್ಲಿಯೇ ಪರಿಹರಿಸಿಕೊಳ್ಳಬೇಕಾಗುತ್ತದೆ. ಈ ಸಮಸ್ಯೆಯ ಪರಿಹಾರ

ದೀರ್ಘಕಾಲದ್ದಾಗಬಹದು ಮತ್ತು ಅಪಾರವಾದ ಸಹನೆ ಬೇಕಾಗಬಹುದು.

ಕಾಶ್ಮೀರ ಸಮಸ್ಯೆ ಪ್ರಾರಂಭದಿಂದಲೂ ಒಂದು ರಾಜಕೀಯ ಸಮಸ್ಯೆಯಾಗಿದೆ; ಜೊತೆಗೆ ಧರ್ಮಭಾವನೆ, ಕೋಮುಭಾವನೆ ಇತ್ಯಾದಿಗಳೂ ಸೇರಿಕೊಂಡಿವೆ. ಆದ್ದರಿಂದ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕಾಗಿ ತ್ರಿವಿಧ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಒಂದು, ರಾಜಕೀಯ ತಂತ್ರ.

ಇಡೀ ಕಾಶ್ಮೀರ ರಾಜ್ಯ ಯಾವ ರೀತಿ ಭಾರತದ ಅವಿಭಾಜ್ಯ ಅಂಗವಾಗಿದೆ ಎಂಬ ಬಗ್ಗೆ ಸಾಕ್ಷಾಧಾರಗಳನ್ನೊಳಗೊಂಡ ಮಾಹಿತಿಯನ್ನು ಅಂತರರಾಷ್ಟ್ರೀಯ ಸಮುದಾಯದ ಮುಂದೆ ವ್ಯವಸ್ಥಿತವಾಗಿ, ನಿರಂತರವಾಗಿ ಮಂಡಿಸಬೇಕು: ಕಾಶ್ಮೀರ ಕಣಿವೆಯಲ್ಲಿ ಮುಕ್ತ ರಾಜಕೀಯ ಚಟುವಟಿಕೆಗಳು ನಡೆಯುವಂತೆ ಮಾಡಬೇಕು. ಅಲ್ಲಿಯ ಜನರಿಗೆ ಪಾಕಿಸ್ತಾನದಲ್ಲಿಯ ಉಸಿರುಗಟ್ಟುವ ವಾತಾವರಣಕ್ಕಿಂತ ಭಾರತದಲ್ಲಿಯ ಮುಕ್ತ ವಾತವರಣ ಮೇಲು ಮತ್ತು ತಮಗೆ ಹೆಚ್ಚು ಲಾಭಕರ ಎಂಬ ಮನೋಭಾವ ಅಲ್ಲಿಯ ಜನತೆಯಲ್ಲಿ ಮೂಡಬೇಕು. ಕಾಶ್ಮೀರದಲ್ಲಿರುವ ಭಯೋತ್ಪಾದಕರು ಹಾಗೂ ಪ್ರತ್ಯೇಕ ಕಾಶ್ಮೀರ ಬಯಸುವ ನಾಯಕರು ಅಲ್ಲಿಯ ಜನತೆಯ ವಿಶ್ವಾಸವನ್ನು ಯಾವ ಕಾರಣಗಳಿಗಾಗಿ ಪಡೆದಿದ್ದಾರೆ ಎಂಬುದನ್ನು ಗುರುತಿಸಿ ಆ ಕಾರಣಗಳ ನಿರಾಕರಣೆಗಾಗಿ ಭಾರತ ಸರ್ಕಾರ ರಾಜಕೀಯವಾಗಿಯೂ, ಆರ್ಥಿಕ ಕಾರ್ಯಕ್ರಮಗಳ ಮೂಲಕವೂ ಪ್ರಯತ್ನಿಸಬೇಕು. ಅಲ್ಲಿಯ ಜನತೆಯಲ್ಲಿ ಪ್ರಜಾ ತಾಂತ್ರಿಕ ವಿಚಾರಗಳು ಹರಡುವಂತೆಯೂ ಮತ್ತು ಅಲ್ಲಿ ಜನತಾ ಪ್ರತಿನಿಧಿಗಳ ಸಂಘಟನೆಗಳು ಸ್ಥಾಪಿತವಾಗುವಂತೆಯೂ ಪ್ರಯತ್ನಿಸಬೇಕು. ಕಾಶ್ಮೀರ ಕಣಿವೆಯಲ್ಲಿ ಇಂದು ಬಹಳ ಅಗತ್ಯವಾಗಿರುವುದು ಪ್ರಜಾ ಪ್ರಭುತ್ವದ ವಾತವರಣ.

ಎರಡು, ಅಭಿವೃದ್ಧಿ ತಂತ್ರ. ಭಯೋತ್ಪಾದನೆ, ಹಿಂಸಾಚಾರ, ಯುದ್ಧ ಕಾರಣದಿಂದ ಕಾಶ್ಮೀರದ ಜನತೆಯಲ್ಲಿ ನಿರಕ್ಷರತೆ, ಬಡತನ, ನಿರುದ್ಯೋಗ ಇತ್ಯಾದಿ ಸಮಸ್ಯೆಗಳು ವ್ಯಾಪಕವಾಗಿವೆ., ಅಲ್ಲಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ಅನೇಕ ಅಡಚಣೆಗಳಿವೆ., ಸಾರಿಗೆ ಸಂಪರ್ಕ ಸಮರ್ಪಕವಾಗಿಲ್ಲ ಈ ಮುಂತಾದ ಆರ್ಥಿಕ, ಮೂಲಭೂತ ಸೌಕರ್ಯಗಳ ಸುಧಾರಣೆಗಾಗಿ ಸಮರೋಪಾದಿಯಲ್ಲಿ ಪ್ರಯತ್ನಿಸಬೇಕು. ಈಗಾಗಲೇ ಕೇಂದ್ರ ಸರ್ಕಾರವು ಇಂಥ ಉದ್ದೇಶಗಳಿಗೆ ೬ ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿರುವುದು ಸರಿಯಾದ ಕ್ರಮವಾಗಿದೆ. ಆದರೆ ಕಾಶ್ಮೀರದಲ್ಲಿಯೂ ವ್ಯಾಪಕ ಭ್ರಷ್ಟಾಚಾರ ಇರುವುದರಿಂದ ಅಭಿವೃದ್ಧಿಗೆ ಸಂಬಂಧಿಸಿದ ಈ ಹಣ ದುರುಪಯೋಗವಾಗದಂತೆಯೂ ಮತ್ತು ಆ ಹಣ ಯಾರಿಗೆ ತಲುಪಬೇಕೋ ಅವರಿಗೆ ತಲುಪುವಂತೆ ನೋಡಿಕೊಳ್ಳಬೇಕಾದುದೂ ಬಹಳ ಅಗತ್ಯವಾಗಿದೆ.

# ಸ್ವಾತಂತ್ರ್ಯ ಹೋರಾಟಗಾರರಲ್ಲಿ ರಾಷ್ಟ್ರೀಯತೆ ಮತ್ತು ಧಾರ್ಮಿಕತೆ

ಲೇ : ಎನ್. ಬೆಂಜಮಿನ್ ಮತ್ತು ಬಿ.ಬಿ. ಮೊಹಾಂತಿ

**ಭಾ**ರತದಲ್ಲಿ ರಾಷ್ಟ್ರೀಯತೆಯನ್ನು ಮೂರು ದೃಷ್ಟಿ ಕೋನಗಳಲ್ಲಿ ನೋಡಲಾಗುತ್ತದೆ. ಭಾರತವೊಂದಲ್ಲ ಆದರೆ ಅನೇಕ ಭಾರತಗಳಿವೆ ಎಂದು ಸಿದ್ಧಪಡಿಸಲು ಬ್ರಿಟಿಷ್ ರಾಜತಂತ್ರಜ್ಞಾನಿಗಳೂ ಮತ್ತು ಬ್ರಿಟಿಷ್ ಲೇಖಕರೂ ಪ್ರಯತ್ನಿಸಿದರು. ಇದರ ಪರಿಣಾಮವೇನೆಂದರೆ ಒಂದು ವೇಳೆ ಬ್ರಿಟಿಷರು ಭಾರತದಿಂದ ಹಿಂದಿರುಗಿದರೆ ಭಾರತವು ಛಿದ್ರವಿಛಿದ್ರವಾಗುವುದು ಮತ್ತು ಆಂತರಿಕ ಯುದ್ಧಗಳು ಸಂಭವಿಸುವುವು. ಆದ್ದರಿಂದ ಭಾರತದಲ್ಲಿ ಇಂಗ್ಲೀಷರ ಇರುವಿಕೆ ಅನಿವಾರ್ಯ. ಎರಡನೆಯದಾಗಿ ಮುಸ್ಲಿಂ ಕೋಮುವಾದಿಗಳು ಹಿಂದೂ ಭಾರತಕ್ಕೆ ಸೇರಿದಂತೆ ಮುಸ್ಲಿಂ ಭಾರತವೂ ಇದೆ ಎಂಬ ವಾದವನ್ನು ಮಂಡಿಸಿದರು. ಇದೇ ರೀತಿಯ ವಾದವನ್ನು ಹಿಂದೂ ಮೂಲಭೂತವಾದಿಗಳು ಸಹ ಮಂಡಿಸಿದರು. ಒಂದು ವೇಳೆ ಪಾಕಿಸ್ತಾನವು ಮುಸ್ಲೀಂರ ಮೂಲ ದೇಶವಾಗಿ ಇರುವುದಾದರೆ ಹಿಂದೂಸ್ತಾನವು ಪ್ರಕೃತಿ ಸಹಜವಾಗಿ ಹಿಂದೂಗಳ ಮೂಲನೆಲೆಯಾಗಿರಬೇಕು. ಮೂರನೆಯದಾಗಿ ಧರ್ಮನಿರಪೇಕ್ಷ ವಿಚಾರದ ರಾಷ್ಟ್ರೀಯವಾದಿಗಳು ಬಹು ಜನಾಂಗೀಯ ಮತ್ತು ಬಹು ಧಾರ್ಮಿಕ, ಆದರೆ, ಸಂಘಟಿತಗೊಂಡ ಭಾರತದ ಬಗ್ಗೆ ಆಲೋಚಿಸಿದರು. ಇಂಥ ಭಾರತದಲ್ಲಿ ಎಲ್ಲ ಜಾತಿಗಳ, ಧರ್ಮಗಳ ಮತ್ತು ಜನಾಂಗಗಳ ಜನರು ತಮ್ಮ ನೆಲೆಯನ್ನು ಕಂಡುಕೊಳ್ಳುವರು ಎಂಬುದಾಗಿಯೂ ರಾಷ್ಟ್ರವಾದಿಗಳು ಭಾವಿಸಿದರು. ಉದಾಹರಣೆಗೆ ೧೮೯೩ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಸಮಾವೇಶದ ಅಧ್ಯಕ್ಷತೆಯನ್ನು ವಹಿಸುತ್ತಾ ದಾದಾಭಾಯಿನವರೋಜಿ ಈ ಕೆಳಗೆ ಕಾಣಿಸಿದ ಅಂಶದ ಮೇಲೆ ಒತ್ತುಕೊಟ್ಟರು. "ನಾವು ಯಾವುದೇ ರಾಜಕೀಯ ಅಥವಾ ರಾಷ್ಟ್ರೀಯ ಅನುಕೂಲತೆಯನ್ನು ಅಥವಾ ಲಾಭವನ್ನು ಪಡೆದರೂ ಅದು ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ವರ್ಗಗಳಿಗೂ ದೊರೆಯಬೇಕು. ಆಗ ಎಲ್ಲರಿಗೂ ಒಂದೇ ರೀತಿಯ ಲಾಭವಾಗುತ್ತದೆ. ನಾವೆಲ್ಲರೂ ಒಂದೇ ದೋಣಿಯಲ್ಲಿದ್ದೇವೆ. ಆದ್ದರಿಂದ ನಾವೆಲ್ಲರೂ ಒಟ್ಟಿಗೆ ಮುಳುಗಬೇಕು ಅಥವಾ ಈಜಬೇಕು".

ರಾಷ್ಟ್ರೀಯತ್ವದ ಭಾವನೆಯನ್ನು ಪುನಶ್ಚೇತನಗೊಳಿಸಬೇಕೆಂಬ ಪ್ರಾರಂಭದ ರಾಷ್ಟ್ರೀಯವಾದಿಗಳ ಇಚ್ಛೆಯು ಭಾರತದೊಂದಿಗೆ ಬ್ರಿಟಿಷರ ಸಂಬಂಧವನ್ನು ಸಮರ್ಥಿಸುವಂತೆ ಮಾಡಿತು. ೧೮೯೭ರಲ್ಲಿ ಆಧುನಿಕ ಕೇರಳದ ಮೇಧಾವಿ ಲೇಖಕ ಸಿ. ಶಂಕರನ್ ನಾಯರ್ ಈ ರೀತಿ ಅಭಿಪ್ರಾಯ ಪಟ್ಟಿದ್ದರು :

"ಇಂಗ್ಲೆಂಡಿನ ನೆರವಿನಿಂದ ಮತ್ತು ಅದರ ಮಾರ್ಗದರ್ಶನದಿಂದ ಮಾತ್ರವೇ ನಾವು ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಬಹುದು ಮತ್ತು ಸ್ವಾತಂತ್ರ್ಯವನ್ನು ಪಡೆಯಬಹುದು ಈ ಆಶೆಯೇ ನಮ್ಮನ್ನು ಇಂಗ್ಲೆಂಡ್‌ನೊಂದಿಗೆ ಪೂರ್ಣವಾಗಿ ಬಂಧಿಸಿದೆ".

ಇದೇ ರೀತಿಯಾಗಿ ೧೯೦೭ರಲ್ಲಿ ಗೋಖಲೆ ಹೇಳಿದರು:

"ಯಾವುದೇ ವಿಧವಾದ ಜಾತಿ ಮತ್ತು ಧರ್ಮದ ಭೇದಭಾವವಿಲ್ಲದೆ. ತಮ್ಮ ವ್ಯಕ್ತಿತ್ವದ ಪೂರ್ಣವಿಕಾಸವನ್ನು ಮಾಡಿಕೊಳ್ಳಲು ನಮ್ಮ ಸ್ತ್ರೀ-ಪುರುಷರಿಗೆ ಅವಕಾಶವಿರಬೇಕೆಂಬುದೇ ನನ್ನ ಇಚ್ಛೆಯಾಗಿದೆ. ಈ ಉದ್ದೇಶದ ಸಾಧನೆಗಾಗಿ ಯಾವುದೇ ವಿಧವಾದ ಅಡೆತಡೆಗಳಾಗಲೀ ಮತ್ತು ಅಸ್ವಾಭಾವಿಕವಾದ ನಿರ್ಬಂಧಗಳಾಗಲೀ ಇರಕೂಡದೆಂಬುದು ಸಹ ನನ್ನ ಅಭಿಪ್ರಾಯವಾಗಿದೆ. ರಾಜಕೀಯವಾಗಿಯೂ ಕೈಗಾರಿಕೆಯಲ್ಲಿಯೂ. ಧರ್ಮ, ಸಾಹಿತ್ಯ, ವಿಜ್ಞಾನ ಮತ್ತು ಕಲೆಗಳಲ್ಲಿಯೂ ಭಾರತವು ಪ್ರಪಂಚದ ಇತರ ದೇಶಗಳ ಸಮೂಹದಲ್ಲಿ ಯೋಗ್ಯ ಸ್ಥಾನವನ್ನು ಪಡೆಯಬೇಕೆಂದು ಕೂಡ ನಾನು ಬಯಸುತ್ತೇನೆ. ಈ ಮಹತ್ವಾಕಾಂಕ್ಷೆ ಎಲ್ಲ ಅರ್ಥದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಕಕ್ಷೆಯೊಳಗೇ ಸಾಧಿತವಾಗಬಲ್ಲದು".

ಬಿಪಿನ್ ಚಂದ್ರಪಾಲರು ತಮ್ಮ ಎಲ್ಲ ಬರಹಗಳಲ್ಲಿ ವೈದಿಕ ಚಿಹ್ನೆಯಾದ ಓಂ ಅನ್ನು ಬಳಸುತ್ತಿದ್ದರೂ ಕೂಡ ಮುಸ್ಲಿಂರು ಭಾರತೀಯ ಸಾಂಸ್ಕೃತಿಕ ಪರಂಪರೆಯ ಅಂಗವಾಗಿದ್ದಾರೆಂದು ತಿಳಿದಿದ್ದರು.

ಸುರೇಂದ್ರನಾಥ ಬ್ಯಾನರ್ಜಿಯವರು ಭಾರತೀಯ ಕಾಂಗ್ರೆಸ್ ಎಲ್ಲ ಪ್ರಕಾರದ ಭಾರತೀಯರ ಪಾರ್ಲಿಮೆಂಟ್ ಎಂದೇ ಭಾವಿಸಿದ್ದರು ಮತ್ತು ಭಾರತದ ಎಲ್ಲ ಧರ್ಮಗಳ ಪ್ರತಿನಿಧಿಗಳು ಕಾಂಗ್ರೆಸ್‌ನಲ್ಲಿರಬೇಕೆಂದು ಬಯಸಿದ್ದರು. ಆದ್ದರಿಂದ ಅವರು ಮತ್ತು ಅವರ ಜೊತೆಗಾರರು ಮುಸ್ಲಿಂ ಪ್ರತಿನಿಧಿಗಳಿಗೆ ಕಾಂಗ್ರೆಸ್ ಸಮ್ಮೇಳನಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಲು ರೈಲು ಪ್ರಯಾಣದ ಖರ್ಚನ್ನೂ ಕೊಡುತ್ತಿದ್ದರು.

ಮುಂದಿನ ವರ್ಷಗಳಲ್ಲಿ ರಾಷ್ಟ್ರೀಯ ನಾಯಕತ್ವವು ಪೂರ್ಣ ಸ್ವರಾಜ್ಯದ ಧ್ಯೇಯವನ್ನು ಹೊಂದಿತ್ತು. ಇದರ ಅರ್ಥ ಭಾರತ ಮತ್ತು ಇಂಗ್ಲೆಂಡ್ ನಡುವಿನ ರಾಜಕೀಯ ಸಂಬಂಧಗಳ ವಿಚ್ಛೇದನ. ಅವರ ದೃಷ್ಟಿಯಲ್ಲಿ ರಾಷ್ಟ್ರೀಯತೆಯೆಂದರೆ ಸಂಘಟಿತವೂ ಮತ್ತು ಸ್ವತಂತ್ರವೂ ಆದ ಭಾರತ. ೧೯೨೯ ರಲ್ಲಿ ಸುಭಾಷ್‌ಚಂದ್ರಭೋಸ್ ಹೀಗೆ ಹೇಳಿದರು:-

"ಯಾವುದೇ ಒಬ್ಬ ವ್ಯಕ್ತಿ ಬಹುಸಂಖ್ಯಾತ ಸಮಾಜಕ್ಕೇ ಸೇರಿರಲಿ ಅಥವಾ ಅಲ್ಪಸಂಖ್ಯಾತ ಸಮುದಾಯಕ್ಕೇ ಸೇರಿರಲಿ ಎಲ್ಲರೂ ಯಾವುದೇ ತಾರತಮ್ಯ

ವಿಲ್ಲದೆ ಸ್ವಾತಂತ್ರ್ಯವನ್ನು ಹೊಂದಿರಬೇಕು' ಈ ದೃಷ್ಟಿಕೋನದಿಂದ ನೋಡಿದಾಗ ಸ್ವಾತಂತ್ರ್ಯವೆಂದರೆ ಸಮಾನತೆ ಮತ್ತು ಸಮಾನತೆಯಿಂದ ಭ್ರಾತೃತ್ವ"ವೆಂದು ಅರ್ಥವಾಗುತ್ತದೆ.

ಅನೇ ರೀತಿ ಸರೋಜಿನಿ ನಾಯ್ಡು ಕೂಡ ಅಭಿಪ್ರಾಯ ಪಟ್ಟಿದ್ದರು.

"ಹಿಂದೂಗಳ ಆಧ್ಯಾತ್ಮಿಕ ಶಕ್ತಿ ಮತ್ತು ಇಸ್ಲಾಂಮಿನ ಶಕ್ತಿಗಳನ್ನು ಒಂದುಗೂಡಿಸಬೇಕು. ವ್ಯಕ್ತಿಗತವಾದ ದ್ವೇಷಗಳನ್ನು ಮತ್ತು ಆರೋಪ ಪ್ರತ್ಯಾರೋಪಗಳನ್ನು ಮರೆಯಬೇಕು. ನಿಜವಾದ ಸಹೋದರತ್ವದ ಅರ್ಥದಲ್ಲಿ ದೇಶವನ್ನು ಒಂದು ಗೂಡಿಸಬೇಕು."

ಜವಹರಲಾಲ್ ನೆಹರು ಈ ರೀತಿ ಬರೆದರು:–

"ರಾಷ್ಟ್ರೀಯತೆಯೆಂದರೆ ಅದು ಹಿಂದೂ ರಾಷ್ಟ್ರೀಯತೆಯಂದಾಗಲಿ, ಮುಸ್ಲೀಂ ರಾಷ್ಟ್ರೀಯತೆಯಂದಾಗಲಿ ಅಥವಾ ಸಿಖ್ ರಾಷ್ಟ್ರೀಯತೆಯಂದಾಗಲಿ ಅರ್ಥವಲ್ಲ. ಹಿಂದೂ, ಸಿಖ್ ಅಥವಾ ಮುಸ್ಲೀಂ ರಾಷ್ಟ್ರೀಯತೆಯೆಂದು ನೀವು ಮಾತನಾಡಿದಾಗ ಭಾರತದ ಪರವಾಗಿ ಮಾತನಾಡಿದಂತಾಗುವುದಿಲ್ಲ." ಹೀಗೆ ಇನ್ನೂ ಅನೇಕ ರಾಷ್ಟ್ರೀಯ ನಾಯಕರ ಮಾತುಗಳನ್ನು ಅವರ ಭಾಷಣಗಳಿಂದ ಮತ್ತು ಲೇಖನಗಳಿಂದ ಆಯ್ದು ಅವರು ಹೊಂದಿದ್ದ ಧರ್ಮ ನಿರಪೇಕ್ಷ (secalar) ದೃಷ್ಟಿಕೋನವನ್ನು ತೋರಿಸಬಹುದು.

ಇತ್ತೀಚಿಗೆ ಪ್ರಶಾಂತ್ ನಂದಿ ಎಂಬುವರು ರಾಷ್ಟ್ರೀಯತೆ ಮತ್ತು ಧಾರ್ಮಿಕತೆ ಎಂಬ ವಿಷಯವಾಗಿ ಪ್ರಬಂಧವನ್ನು ಬರೆದಿದ್ದಾರೆ. ಭಾರತೀಯರ ವಿವಿಧತೆಗಳಲ್ಲಿ ಏಕತೆ ಇದೆಯೆಂಬುದನ್ನು ಸಿದ್ಧಪಡಿಸುವುದೇ ಅವರ ಆ ಪ್ರಬಂಧದ ಮುಖ್ಯ ವಿಷಯವಾಗಿದೆ. ಅವರ ಆ ಪ್ರಬಂಧ ಪಠ್ಯಪುಸ್ತಕದಲ್ಲಿಯು ಒಂದು ಪಾಠದಂತಿದೆ. ಅದರಲ್ಲಿ ಅವರು ಸ್ವಾಮಿ ವಿವೇಕಾನಂದ ಮತ್ತು ರವೀಂದ್ರನಾಥಟಾಗೋರರೂರವರ ಬಗ್ಗೆಯೂ ಬರೆಯುತ್ತಾರೆ. ಯಾವ ದೃಷ್ಟಿಯಿಂದಲು ಅವರಿಬ್ಬರು ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ಪ್ರಶಾಂತ್ ನಂದಿ ಅಭಿಪ್ರಾಯಪಡುತ್ತಾರೆ. ಆದರೆ ಎಲ್ಲ ಧರ್ಮಗಳಲ್ಲಿರುವ ಏಕತೆಯ ಮಾತನ್ನು ವಿವೇಕಾನಂದರು ಒತ್ತಿ ಹೇಳಿರುವುದನ್ನು ಅವರು ಎತ್ತಿ ತೋರಿಸುತ್ತಾರೆ. ಈ ಒಂದು ಪರಂಪರೆಯೇ ಆಧುನಿಕ ಸ್ವತಂತ್ರ ಭಾರತದ ಸಂಸ್ಥಾಪಕರ ವಿಚಾರದ ಮೂಲ ದ್ರವ್ಯವಾಗಿತ್ತೆಂದು ಅವರು ಹೇಳುತ್ತಾರೆ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರೊಬ್ಬರೇ ಅಲ್ಲ. ಇವರೊಂದಿಗೆ ದಯಾನಂದ ಸರಸ್ವತಿ ಕೂಡ ಇದ್ದರು. ಅವರು ಆರ್ಯಸಮಾಜವನ್ನು ಸ್ಥಾಪಿಸಿದರು. ಅವರ ಪ್ರಕಾರ ಭಾರತೀಯ ಸಮಾಜದಲ್ಲಿ ವಿದೇಶಿ ದಾಳಿಕೋರರು

ಸೇರ್ಪಡೆಯಾಗಲು ಕಾರಣವೇನೆಂದರೆ ಅವರು ಸಣ್ಣ ಸಂಖ್ಯೆಯಲ್ಲಿದ್ದುದು ಮತ್ತು ಮಿಶ್ರ ವಿವಾಹಗಳ ಕಾರಣದಿಂದಾಗಿ ಅವರು ತಮ್ಮದೇ ಆದ ಲಕ್ಷಣಗಳನ್ನು ಉಳಿಸಿಕೊಳ್ಳಲು ಅಸಮರ್ಥರಾದದು. ಆದ್ದರಿಂದ ಅವರು ತಮ್ಮ ಪ್ರಭುತ್ವಕಾರಿ ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಕಳೆದುಕೊಂಡರು. ಆದರೆ ಈ ಮಾತಿಗೆ ಎರಡು ಧರ್ಮಗಳು ಅಪವಾದಗಳಾಗಿವೆ. ಒಂದು ಯಹೂದಿ ಧರ್ಮ ಮತ್ತು ಇನ್ನೊಂದು ಪಾರ್ಸಿಗಳು. ಅವರಿಬ್ಬರೂ ಬಹಳ ಅಲ್ಪ ಸಂಖ್ಯಾತರಾಗಿದ್ದರು ಮತ್ತು ಅವರು ಆಡಳಿತವರ್ಗದವರೂ ಆಗಿರಲಿಲ್ಲ. ಅವರು ಯಾವುದೇ ಧಾರ್ಮಿಕ ದಾಳಿಗೆ ತುತ್ತಾಗದೆ ಇದ್ದುದರಿಂದ ಅವರು ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬರಲು ಸಮರ್ಥರಾದರು. ಇಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ, ಚೀನಾ ದೇಶವೊಂದನ್ನು ಬಿಟ್ಟರೆ ಯಹೂದಿಗಳ ದಾಳಿಗೆ ತುತ್ತಾಗದೆ ಉಳಿದಂಥ ದೇಶ ಭಾರತವೊಂದೆ. ಇನ್ನು ಮುಸ್ಲೀಂರ ಬಗ್ಗೆ ಹೇಳುವುದಾದರೆ ಭಾರತೀಯ ಪರಂಪರಾಗತ ಸಮಾಜವು ಅವರನ್ನು ತಮ್ಮಲ್ಲಿ ಸಮರಸ ಮಾಡಿಕೊಳ್ಳಲು ಎರಡು ಕಾರಣಗಳಿಂದ ವಿಫಲವಾಯಿತು. ಮೊದಲನೆಯ ಕಾರಣ ಅವರು ೬೦೦ ವರ್ಷಗಳ ಕಾಲ ಆಡಳಿತವರ್ಗವಾಗಿದ್ದರು. ಆದ್ದರಿಂದ ಅವರು ರಾಜಕೀಯ ಮತ್ತು ಸಾಮಾಜಿಕ ಸ್ಥಾನಗಳನ್ನು ಅನುಭವಿಸುತ್ತಾ ಬಂದರು. ಎರಡನೆಯದಾಗಿ ಅವರ ಸಾಮಾಜಿಕ ದೃಷ್ಟಿಕೋನಗಳು ಭಾರತದ ಹೊರಗಿನ ಶಕ್ತಿಗಳನ್ನೇ ಅವಲಂಬಿಸಿದ್ದವು. ಮುಸ್ಲಿಂ ರಾಷ್ಟ್ರೀಯ ನಾಯಕರು ಕಾಂಗ್ರೆಸ್ಸಿನ ಕಾರಣದಿಂದಾಗಿ ಭಾರತದ ವಿವಿಧ ಭಾಗಗಳಿಂದ ಬಂದು ಒಂದೆಡೆ ಸೇರಿದರು. ಅನಂತರ ಅವರು ವಿಶಾಲ ದೃಷ್ಟಿಕೋನವನ್ನು ಬೆಳೆಸಿಕೊಂಡರು. ಪ್ರಾಚೀನ ಕಾಲದ ಭಾರತದ ಚಿತ್ರವೇ ಈ ನಾಯಕರ ದೂರದರ್ಶಿತ್ವವನ್ನು ಪ್ರಭಾವಿತಗೊಳಿಸಿತು. ನೂರಾರು ವರ್ಷಗಳ ಅನೈಕ್ಯತೆ ಮತ್ತು ಸಾಮಾಜಿಕ ಅವನತಿಯ ನಂತರ ಭಾರತ ಈಗ ಪಾಶ್ಚಿಮಾತ್ಯರ ಪ್ರಗತಿ ಮತ್ತು ಸುಧಾರಣೆಯ ಚೇತನವನ್ನು ಪಡೆದು ವಿಶ್ವದ ರಾಷ್ಟ್ರಗಳ ಸಮೂಹದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆಯುವ ಕಾಲವು ಬಂದಿದೆಯೆಂದು ಅವರು ಭಾವಿಸಿದರು. ಅವರು ವಿಶಾಲವಾದ ಮತ್ತು ಬಲಿಷ್ಠವಾದ ಶಾಸನಸಭೆಗಳಿಗಾಗಿ ಬೇಡಿಕೆಯನ್ನು ಇಟ್ಟರು. ತನ್ಮೂಲಕ ಇಂಗ್ಲೀಷ್ ಸರ್ಕಾರವನ್ನು ನಿಯಂತ್ರಿಸಬಹುದೆಂದು ಅವರು ಭಾವಿಸಿದರು. ಅಲ್ಲದೆ, ಭಾರತ ಮತ್ತು ಇಂಗ್ಲೆಂಡಿನಲ್ಲಿ ಏಕಕಾಲಕ್ಕೆ ನಾಗರಿಕ ಸೇವಾ ಅಧಿಕಾರಿಗಳಿಗಾಗಿ ಪರೀಕ್ಷೆ ನಡೆಸಲು ಒತ್ತಾಯಿಸುವುದರ ಜೊತೆಗೆ ಇಂಗ್ಲೀಷ್ ಸೇನೆಯಲ್ಲಿ ಭಾರತೀಯರಿಗೂ ಅವಕಾಶವಿರಬೇಕೆಂದು ಒತ್ತಾಯಿಸಿದರು. ಇದರಿಂದಾಗಿ ನೌಕರಶಾಹಿಯಲ್ಲಿ ಬ್ರಿಟಿಷರ ಏಕಸ್ವಾಮಿತ್ವವನ್ನು

ಮುರಿಯಲು ಸಾಧ್ಯವಾಯಿತು. ನ್ಯಾಯಾಂಗ ಮತ್ತು ಆಡಳಿತಾಂಗವನ್ನು ಬೇರ್ಪಡಿಸಬೇಕೆಂಬ ಒತ್ತಾಯದ ಮೂಲಕ ಜಿಲ್ಲಾ ಹಂತದಲ್ಲಿ ಇದ್ದ ಬ್ರಿಟಿಷ್ ಅಧಿಕಾರಿಗಳ ಸರ್ವಾಧಿಕಾರಿತನವನ್ನು ಕಿತ್ತೆಸೆಯಲು ಸಾಧ್ಯವಾಯಿತು. ಈ ಪ್ರಕಾರದ ಮತ್ತು ಇಂಥದೇ ಬೇರೆ ಪ್ರಕಾರದ ವಿಷಯಗಳು ಪ್ರಾರಂಭಿಕ ಸ್ವಾತಂತ್ರ್ಯ ಹೋರಾಟಗಾರರ ಪ್ರೀತಿಯ ವಿಷಯಗಳಾಗಿದ್ದವು. ಇಂಥ ಬೇರೆ ಸುಧಾರಣೆಗಳನ್ನು ಬ್ರಿಟೀಷ್‌ರಿಂದ ಪಡೆಯುವುದು ಸಾಧ್ಯವಿಲ್ಲವೆಂದು ಅನಿಸಿದಾಗ ಅವರು ಪೂರ್ಣ ಸ್ವರಾಜ್ಯದ ಬೇಡಿಯನ್ನು ಇಡಲು ಪ್ರಾರಂಭಿಸಿದರು.

ಎಲ್ಲ ಸ್ವಾತಂತ್ರ್ಯ ಹೋರಾಟಗಾರರು ಧರ್ಮ ನಿರಪೇಕ್ಷತೆಯ (secular) ಲಕ್ಷಣಗಳನ್ನು ಹೊಂದಿದ್ದರೆಂದು ಹೇಳಲು ಸಾಧ್ಯವಿಲ್ಲ. ಅವರಲ್ಲಿ ಅನೇಕರು ಕೋಮು ಭಾವನೆಗಳನ್ನು ಸಹ ಹೊಂದಿದ್ದರು. ಅವರ ಜೀವನ ಚರಿತ್ರಕಾರರು ಮತ್ತು ಬೆಂಬಲಿಗರು ಆ ನಾಯಕರು ಹೊಂದಿದ್ದ ಕೋಮು ಭಾವನೆಯನ್ನು ಮುಚ್ಚಲು ಪ್ರಯತ್ನಿಸಿದರು. ಲಾಲಾಲಜಪತರಾಯ್ ಹಿಂದೂ ಭಾವನೆಯ ಭಾರತೀಯರಾಗಿದ್ದರು. ಮುಸ್ಲೀಮರು ಮತ್ತು ಇಂಗ್ಲೀಷರು ಒಂದೇ ರೀತಿಯವರು ಎಂದು ಲಜಪತ್‌ರಾಯ್ ಭಾವಿಸಿದ್ದರು. ಈ ರೀತಿ ಮುಸ್ಲೀಂ ಕೋಮುವಾದಿಗಳು ಲಜಪತ್‌ರಾಯ್ ಬಗ್ಗೆ ಹೇಳಲು ಇಷ್ಟ ಪಡುತ್ತಾರೆ. ಈ ರೀತಿ ಮುಸ್ಲಿಂರು ಹೇಳುವುದಕ್ಕೆ ಕಾರಣ ಲಜಪತ್‌ರಾಯ್ ಹೊಂದಿದ್ದ ವಿಚಾರಗಳೇ. ಅವರ ಪ್ರಕಾರ ಯಾರು ತಮ್ಮನ್ನು ತಾವು ಸಂಘಟಿಸಿಕೊಳ್ಳಲು ಉದಾಸೀನರಾಗಿರುತ್ತಾರೋ ಅಂಥವರು ಸಂಘಟಿತರಾದವರಿಗೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕಾಗುತ್ತದೆ. ಬ್ರಿಟಿಷರ ಶಕ್ತಿಯು ಅವರ ಸಂಘಟನಾ ಸಾಮರ್ಥ್ಯದಲ್ಲಿದೆ. ಅದೇ ರೀತಿ ಮುಸ್ಲೀಂರು ಸಂಘಟನೆಗೊಂಡು ಹಿಂದೂಗಳು ಸಂಘಟಿತರಾಗಲೂ ನಿರಾಕರಿಸಿದರೆ ಅಥವಾ ಉದಾಸೀನರಾದರೆ ಆಗ ಆಗುವ ಪರಿಣಾಮಗಳು ಸ್ಪಷ್ಟವಾಗಿಯೇ ಇವೆ. ಹಿಂದೂಗಳು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿರುವುದರಿಂದ ಅವರೇ ಒಂದು ರಾಷ್ಟ್ರವಾಗಿದ್ದಾರೆ ಎಂದು ಪ್ರಥಮ ಪಂಜಾಬ್ ರಾಜ್ಯ ಹಿಂದೂ ಸಮ್ಮೇಳನದಲ್ಲಿ ಲಜಪತರಾಯ್ ಅಭಿಪ್ರಾಯಪಟ್ಟರು.

ವಿ.ಡಿ. ಸಾರ್ವರ್ಕರ್ ಈ ವಿಷಯದಲ್ಲಿ ಇನ್ನೂ ಹೆಚ್ಚು ಬಂಡಾಯಗಾರರಾಗಿದ್ದರು. ೧೯೩೯ ರಲ್ಲಿ ಬಿಹಾರ ಹಿಂದೂ ಮಹಾಸಭಾ ಸಮ್ಮೇಳನವನ್ನು ಉದ್ದೇಶಿಸಿ ಈ ರೀತಿ ಹೇಳಿದರು "ಹಿಂದುಸ್ತಾನವು ಹಿಂದೂಗಳಿಗೆ ಸೇರಿದ್ದಾಗಿದೆ ಮತ್ತು ಹಿಂದೂಗಳಲ್ಲದೆ ಬೇರೆ ಯಾರೂ ಅದನ್ನು ಆಳುವಂತಿಲ್ಲ. ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರು ಭಾರತವನ್ನು ತಮ್ಮ ತಾಯಿ ನಾಡೆಂದು ಭಾವಿಸಿದ್ದಾರೆ. ಒಂದು ವೇಳೆ ಅವರು ಸಾಂಸ್ಕೃತಿಕ ಮತ್ತು ಧಾರ್ಮಿಕ ರಕ್ಷಣೆಗಾಗಿ ಬೇಡಿಕೊಂಡಲ್ಲಿ ಆ ಬೇಡಿಕೆಯನ್ನು ಹಿಂದೂಗಳು ನಿರಾಕರಿಸಕೂಡದು.

ಇನ್ನು ತಿಲ್ಲಕರ ಬಗ್ಗೆ ಒಂದು ಸ್ವತಂತ್ರ ಅಧ್ಯಯನದ ಪ್ರಕಾರ ತಿಲಕರು ಓರ್ವ ಧಾರ್ಮಿಕ ಪುನರುತ್ಥಾನಕರಾಗಿದ್ದರು. ಬಾಂಬೆ ಪ್ರಾಂತ್ಯದಲ್ಲಿ ಅವರು ಬಹಿರಂಗವಾಗಿ ಧರ್ಮವನ್ನು ರಾಜಕೀಯಕ್ಕೆ ಒಯ್ದರು. ಅವರು, "ಹಿಂದೂ ಧರ್ಮವು ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಕ್ಕಿಂತ ಹಿರಿದಾದುದು ಮತ್ತು ಅಧರ್ಮವನ್ನು ತೊಲಗಿಸಲು ಕೃಷ್ಣನ ಅವತಾರವಾಗುವುದು. ಮೊಹಮ್ಮದ್ ಪೈಗಂಬರ್ ನಂತರ ಬೇರೆ ದೇವದೂತ ಬರುವ ಬಗ್ಗೆ ಯಾವ ವಚನಬದ್ಧತೆಯು ಇಲ್ಲ. ಜೀಸಸ್ ಒಂದೇ ಸಲ ಬರುವುದಾಗಿ ಹೇಳಿದ. ಆದ್ದರಿಂದ ಇನ್ನು ಯಾವ ಧರ್ಮವೂ ಹಿಂದೂ ಧರ್ಮದಷ್ಟು ಆಶಾವಾದಿಯಾಗಿಲ್ಲ". ಎಂದು ಹೇಳಿದರು. ತಿಲಕರು ಗಣಪತಿ ಮತ್ತು ಶಿವಾಜಿ ಉತ್ಸವಗಳನ್ನು, ಹಿಂದೂ ರಾಷ್ಟ್ರೀಯತೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಪ್ರಾರಂಭಿಸಿದರು.

೧೯೦೯ ರಲ್ಲಿ ಮದನ ಮೋಹನ ಮಾಳ್ವಿಯ ಮಾಡಿದ ಭಾಷಣದಲ್ಲಿ ಎಲ್ಲ ಧರ್ಮಗಳಲ್ಲಿ ಐಕ್ಯತೆ ಉಂಟಾಗಬೇಕೆಂದು ಕರೆ ಕೊಟ್ಟರು ಮತ್ತು ವಿವಾದವನ್ನು ಹಾಗೂ ಅನೈಕ್ಯತೆಯನ್ನು ಬೋಧಿಸುವ ಹಿಂದೂಗಳನ್ನು ಮತ್ತು ಮುಸ್ಲಿಂರನ್ನು ಅವರು ಟೀಕಿಸಿದರು. ಆದರೆ ಮಾಳ್ವಿಯ ಕ್ರಮೇಣ ರಾಷ್ಟ್ರೀಯತೆಯಿಂದ ಕೋಮುವಾದದ ಕಡೆಗೆ ವಾಲಿದರು. ೧೯೧೬ ರಲ್ಲಿ ಅವರು ಹಿಂದೂ ಮಹಾಸಭಾದ ಅಧ್ಯಕ್ಷರಾದರು ಮತ್ತು ೧೯೨೨ ರಲ್ಲಿ ಹಿಂದೂ ಸಂಘಟನಾ ಚಳುವಳಿಯನ್ನು ಪ್ರಾರಂಭಿಸಿದರು. ಮಾಳ್ವಿಯ ತಮ್ಮ ಜಾತಿಗೆ ಸೇರಿದ ಬ್ರಾಹ್ಮಣರ ಕೈಯಿಂದಲ್ಲದೆ ಬೇರೆಯವರ ಕೈಯಿಂದ ಊಟವನ್ನು ಮತ್ತು ನೀರನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಮೋತಿಲಾಲ್ ನೆಹರು ಅವರಿಗೆ ಪ್ರಾರಂಭದಿಂದಲೇ ಹಿಂದೂ ಮಹಾಸಭಾದ ಬಗ್ಗೆ ಅನುಮಾನಗಳಿದ್ದವು. ೧೯೧೧ ಜನವರಿ ೬ ರಂದು ಜವಹರಲಾಲರಿಗೆ ಬರೆದ ಪತ್ರದಲ್ಲಿ ಮೋತಿಲಾಲ್ ಹೀಗೆ ಹೇಳಿದ್ದಾರೆ:

"ನನ್ನ ಅಭಿಪ್ರಾಯದಲ್ಲಿ ಹಿಂದೂ ಮಹಾಸಭಾದ ಸ್ಥಾಪನೆಯಿಂದ ಹಿಂದೂ, – ಮಹಮದನ್ ಕಮಿಟಿಯು ಮಾಡಬಹುದಾದ ಎಲ್ಲ ಒಳ್ಳೆಯ ಅವಕಾಶಗಳನ್ನು ಕಡಿಮೆ ಮಾಡಿದೆಯೆಂದು ನನಗನಿಸುತ್ತದೆ. ಅಷ್ಟೇ ಅಲ್ಲ ಕಾಂಗ್ರೆಸ್ಸಿನ ಅಡಿಪಾಯವನ್ನೇ ದುರ್ಬಲಗೊಳಿಸುತ್ತದೆ. ಹಿಂದೂ ಮಹಾಸಭೆಯ ಸ್ಥಾಪನೆಯನ್ನು ನಾನು ಬಹಳವಾಗಿ ವಿರೋಧಿಸಿದೆ. ಆದರೆ ಅದು ಸಾಧ್ಯವಾಗಲಿಲ್ಲ"

ಮೌಲಾನಾ ಆಜಾದ್ ಬೇರೆಯೇ ರೀತಿಯ ವ್ಯಕ್ತಿಯಾಗಿದ್ದರು. ಅವರನ್ನು ಅವರ ಧರ್ಮದವರೇ ಟೀಕಿಸಿದ್ದರು ಮತ್ತು ಜಿನ್ನಾ ಅವರನ್ನು ಕಾಂಗ್ರೆಸ್ಸಿನ ತೋರಿಕೆಯ ಬೊಂಬೆಯೆಂದು ಕರೆದರು. ಇದೆಲ್ಲವನ್ನು ಅಲಕ್ಷಿಸಿ ಆಜಾದರು

ತಮ್ಮ ಸ್ವತ್ತು ಸಮಾನಮನಸ್ಕರಾದ ಮುಸ್ಲೀಂರನ್ನು ಕಲೆಹಾಕಿಕೊಂಡರು. ಇದರ ಫಲಿತಾಂಶವಾಗಿ ದೆಹಲಿಯಲ್ಲಿ ರಾಷ್ಟ್ರವಾದಿ ಮುಸ್ಲೀಂರ ಒಂದು ಸಮ್ಮೇಳನ ನಡೆಯಿತು. ಇದರ ಅಧ್ಯಕ್ಷತೆಯನ್ನು ಅಲ್ಲಾಬಕ್ಷ – ವಹಿಸಿಕೊಂಡಿದ್ದರು. ಆ ಸಮ್ಮೇಳನದಲ್ಲಿ ಸ್ವತಃ ಆಜಾದ್ ಭಾಗವಹಿಸದಿದ್ದರೂ. ತೆರೆಯಮರೆಯಲ್ಲಿದ್ದು ಕೊಂಡು ಆ ಸಮ್ಮೇಳನದ ವ್ಯವಸ್ಥೆಗೆ ನೆರವಾದರು. ದೇಶದಾತ್ಯಂತ ಬಂದ ಸುಮಾರು ೧೪೦೦ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ರಾಷ್ಟ್ರವಾದಿ ಮುಸ್ಲೀಂರ ಬಗ್ಗೆ ಮನ್ನಣೆ ಕೊಡದೆ ಇರುತ್ತಿದ್ದ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಆ ಸಮ್ಮೇಳನದ ನಂತರ ರಾಷ್ಟ್ರವಾದಿ ಮುಸ್ಲೀಂರ ಮಹತ್ವವನ್ನು ಕುರಿತುಕೊಂಡಾದಿತು.

ಕೊನೆಯಲ್ಲಿ ಹೇಳುವುದಾದರೆ ರಾಷ್ಟ್ರೀಯ ಚಳುವಳಿಯು ಒಂದು ಸಂಕೀರ್ಣ ಪ್ರಕ್ರಿಯೆ ಆಗಿತ್ತು. ವಿವಿಧ ದಿಕ್ಕುಗಳಿಂದ ಒತ್ತಡಗಳು, ಸೆಳೆತಗಳು ಇದ್ದವು. ಅನೇಕ ಜನನಾಯಕರು ಪ್ರಾಮಾಣಿಕವಾಗಿ, ತಮ್ಮ ದೃಷ್ಟಿ ಕೋನಗಳಲ್ಲಿ ಧರ್ಮ ನಿರಪೇಕ್ಷ ಭಾವನೆಯುಳ್ಳವರಾಗಿದ್ದರು. ಕೆಲವರು ತಮ್ಮ ಸ್ವಂತ ಸಮುದಾಯದ ಹಿತಕ್ಕೆ ಮಾತ್ರ ತಮ್ಮ ಚಿಂತನೆಯನ್ನು ಸೀಮಿತಗೊಳಿಸಿ ದ್ದರು. ಎಲ್ಲ ರಾಷ್ಟ್ರೀಯ ನಾಯಕರು ಧರ್ಮ ನಿರಪೇಕ್ಷ ಮತ್ತು ಸಂಘಟಿತ ಭಾರತದ ವಿಚಾರಕ್ಕೆ ಬದ್ಧರಾಗಿದ್ದರು. ಈ ಲೇಖನವು ಆ ಕುರಿತು ಒಂದು ಸಮತೋಲನ ಚಿತ್ರವನ್ನು ಕೊಡುವ ಪ್ರಯತ್ನವಾಗಿದೆ. ★

(ಮೇನ್ ಸ್ಟ್ರೀಮ್ ಸಾಭಾರ)

ಅನು : ಸು.ಕೌ

## ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿ ಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ – ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/– ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/– ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

–ಪ್ರಕಾಶಕರು

# ಸ್ವಾತಂತ್ರ್ಯ ಚಳುವಳಿಯಲ್ಲಿ ರೈತ

## ಅಬಾನಿ ಲಾಹಿರಿಯವರಿಂದ ಸಂಕ್ಷಿಪ್ತ ಪರಿಚಯ

**ಲೇ : ಅಬಾನಿ ಲಾಹಿರಿ**

ಅಬಾನಿ ಲಾಹಿರಿ ಓರ್ವ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರೂ, ಸಾಮ್ಯವಾದಿಯೂ, ಸಾಮಾಜಿಕ ಕಾರ್ಯಕರ್ತರೂ ಮತ್ತು ವಿದ್ವಾಂಸರೂ ಆಗಿದ್ದರು, ಬಂಗಾಲಿನಲ್ಲಿ ನಡೆದ "ತೇಭಗ್ ರೈತ ಹೋರಾಟ"ದ ಪ್ರಮುಖ ನಾಯಕರಾಗಿದ್ದರು. ಅನೇಕ ಬುದ್ಧಿ ಜೀವಿಗಳಂತೆ ಲಾಹಿರಿ ಕಾರಾಗೃಹದಲ್ಲಿದ್ದುಕೊಂಡೇ ಕ್ರಾಂತಿಕಾರಿ ಭಯೋತ್ಪಾದಕತೆಯಿಂದ ಮಾರ್ಕ್ಸ್ ವಾದಕ್ಕೆ ಪರಿವರ್ತಿತಗೊಂಡರು. ೧೯೩೨ರಲ್ಲಿ ಅವರು ಕೇವಲ ೧೫ ವರ್ಷದ ಬಾಲಕರಾಗಿದ್ದಾಗ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ೬ ತಿಂಗಳ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. ೧೯೩೩ ರಲ್ಲಿ ಕಾಲೇಜಿಗೆ ಸೇರಿದರು ಮತ್ತು ಅವರು ಬಂಗಾಲಿ ವಿದ್ಯಾರ್ಥಿಗಳ ಸಂಘಟನೆಯೊಂದಿಗೆ ಸಂಬಂಧವಿರಿಸಿಕೊಂಡಿದ್ದ ಅನುಶೀಲನ ಸಮಿತಿಯ ಸಕ್ರಿಯ ಸದಸ್ಯರಾದರು. ೧೯೩೪ ರಲ್ಲಿ ಅವರನ್ನು ಪುನಃ ಬಂಧಿಸಲಾಯಿತು. ಅವರು ಅನೇಕ ವರ್ಷಗಳ ಕಾಲ ಕಾರಾಗೃಹದಲ್ಲಿಯೇ ಕಾಲವನ್ನು ಕಳೆದರು. ೧೯೩೭ ರಲ್ಲಿ ಅವರ ಬಿಡುಗಡೆಯಾಯಿತು. ಕಾರಾಗೃಹದಲ್ಲಿ ಮಾಡಿದ ಅಧ್ಯಯನ ಮತ್ತು ಚರ್ಚೆಗಳ ಕಾರಣದಿಂಗಾಗಿ ಅವರು ೧೯೩೬ ರಲ್ಲಿ ಕಮ್ಯೂನಿಸ್ಟ್ ಸಂಘಟನೆಯನ್ನು ಸೇರಿದರು. ೧೯೩೮ ರಲ್ಲಿ ಅವರ ಬಿಡುಗಡೆಯಾದ ನಂತರ ಅವರು ಕೋಲ್ಕತ್ತದಲ್ಲಿ ಕಾಲೇಜು ಸೇರಿದರು, ಎರಡನೇ ಮಹಾಯುದ್ಧ ಪ್ರಾರಂಭವಾದಕೂಡಲೇ ಅನೇಕ ಪ್ರಮುಖ ಕಮ್ಯೂನಿಸ್ಟ್ ನಾಯಕರು ವಿಶ್ವನಾಥ್ ಮುಖರ್ಜಿಯಂಥವರೂ ಸೇರಿದಂತೆ ಭೂಗತರಾದರು, ಅಬಾನಿ ಲಾಹಿರಿ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟದ ಬಂಗಾಲಿ ಶಾಖೆಯ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದರು. ೧೯೪೦ ರಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷ ಅವರನ್ನು ಬಂಗಾಲಕ್ಕೆ ಹೋಗಿ ರೈತರನ್ನು ಸಂಘಟಿಸಬೇಕೆಂದು ಆದೇಶಿಸಿತು. ಈ ಕುರಿತು ಅಬಾನಿಯವರು ಹೀಗೆ ಹೇಳುತ್ತಾರೆ: "ನಮ್ಮ ಕಾರ್ಯ ಕ್ಷೇತ್ರವನ್ನಾಗಿ ಹಿಮಾಲಯದ ಅಡಿಯಿಂದ ಪದ್ಮಾ ನದಿಯವರೆಗಿನ ಪ್ರದೇಶವನ್ನು ಆಯ್ಕೆ ಮಾಡಿಕೊಂಡೆವು. ಅಂದಿನಿಂದ ಯುದ್ಧ ಮುಗಿಯುವವರೆಗೂ, ಕ್ಷಾಮದ ಸಮಯದಲ್ಲಿಯೂ, ಕೋಮು ಗಲಭೆಗಳಲ್ಲಿಯೂ, ಯುದ್ಧಾನಂತರ ಉಂಟಾದ ಜನ ಪ್ರತಿಭಟನೆಯ ಕಾಲದಲ್ಲೂ ಐತಿಹಾಸಿಕ ತೇಭಗ ಹೋರಾಟ ಮತ್ತು ಬಂಗಾಲ್ ವಿಭಜನೆಯ ಕಾಲದಲ್ಲೂ ನಾನು ಉತ್ತರ ಬಂಗಾಲದ ರೈತರ ಸಂಘಟನಾ ಕಾರ್ಯಕರ್ತನಾಗಿ ಕೆಲಸ ಮಾಡಿದೆ. ೧೯೪೪ ರಿಂದ ೧೯೪೭ರ ವರೆಗೆ ಬಂಗಾಲ್, ರಾಜ್ಯ ಕಿಸಾನ್‌ಸಭಾದ ಸಹಕಾರ್ಯದರ್ಶಿಯಾಗಿದ್ದೆ.

೧೯೪೮ ರಿಂದ ೧೯೫೦ರ ವರೆಗೆ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ೧೯೪೬ ರಿಂದ ೪೭ ರ ವರೆಗೆ ನಡೆದ ತೇಭಗ ಹೋರಾಟದ ಮುಂಚೂಣಿ ನಾಯಕರಲ್ಲಿ ಒಬ್ಬನಾಗಿದ್ದೆ. ೧೯೫೦ ರಲ್ಲಿ ಬಂಧಿತವಾಗಿ ೧೯೫೩ ರಲ್ಲಿ ಬಿಡುಗಡೆಹೊಂದಿದೆ. ಆ ಸಮಯದಲ್ಲಿ ಕೋಲ್ಕತ್ತೆಯಲ್ಲಿ ರಣಧಿವೆಯವರ ನೇತೃತ್ವದಲ್ಲಿ ಒಂದು ಸಮ್ಮೇಳನ ನಡೆಯಿತು, ಅದು ನಡೆದದ್ದು ೧೯೪೮ರಲ್ಲಿ. ರಣಧಿವೆಯವರ ನಾಯಕತ್ವ ಅನುಸರಿಸಿದ್ದ ಏಕಪಕ್ಷೀಯ ಚಿಂತನಾ ಕ್ರಮದ ಬಗ್ಗೆ ಪುನರ್ವಿಚಾರ ನಡೆಯುತಿತ್ತು."

ಪೂರ್ಣ ಸಮಯದ ರಾಜಕೀಯ ಕೆಲಸದ ನಂತರ ಲಾಹಿರಿ ನೌಕರಿಯನ್ನು ಮಾಡಲು ನಿಶ್ಚಯಿಸಿದರು ಮತ್ತು ದೆಹಲಿಗೆ ಬಂದರು. ಆದಾಗ್ಯೂ ಹಿರಿಯ ನಾಯಕರೊಂದಿಗೆ ತಮ್ಮ ಸಂಪರ್ಕವನ್ನು ಕಳೆದುಕೊಳ್ಳಲಿಲ್ಲ ಮತ್ತು ಸಮಾಜವಾದದೊಂದಿಗೆ ಇದ್ದ ತಮ್ಮ ಇಡೀ ಜೀವಮಾನದ ಘನಿಷ್ಠ ಸಂಬಂಧವನ್ನು ಉಳಿಸಿಕೊಂಡೇ ಬಂದರು. ೧೯೮೫ರಲ್ಲಿ ಜೋಷಿ–ಅಧಿಕಾರಿ ಸಮಾಜಶಾಸ್ತ್ರ ಅಧ್ಯಯನ ಸಂಸ್ಥೆ ಸ್ಥಾಪಿತಗೊಂಡಾಗ ಲಾಹಿರಿ ದಿವಂಗತ ಷಫೀಕ್ ನಕ್ವಿಯವರೊಂದಿಗೆ ಆ ಸಂಸ್ಥೆಯ ಪ್ರಮುಖ ಸಂಘಟನಾಕಾರರಾಗಿದ್ದರು. ವಯಸ್ಸಾಗಿದ್ದರೂ, ದೃಷ್ಟಿ ಕಡಿಮೆಯಾಗಿದ್ದರೂ, ಆರೋಗ್ಯ ಸರಿಯಿಲ್ಲದಿದ್ದರೂ. ಅವರು ಈಗಲೂ ಚಟುವಟಿಕೆಯುಳ್ಳವರಾಗಿದ್ದಾರೆ. ಅಧ್ಯಯನದಲ್ಲಿಯೂ ಮತ್ತು ದೇಶದ ರಾಜಕೀಯ ಚಳುವಳಿಗಳ ವಿಶ್ಲೇಷಣೆಯಲ್ಲಿಯೂ ಹಾಗೂ ಅವುಗಳಲ್ಲಿ ಎಡಪಂಥೀಯರ ಪಾತ್ರದ ಬಗ್ಗೆಯೂ ಆಲೋಚನೆ ಮಾಡುವುದರಲ್ಲಿ ತಮ್ಮ ಸಮಯವನ್ನು ಕಳೆಯುತ್ತಾರೆ. ಜೊತೆಗೆ ಕಿರಿಯ ವಯಸ್ಸಿನ ಹೋರಾಟಗಾರರಿಗೆ ನೆರವಾಗುವುದೂ, ಮಾರ್ಗದರ್ಶನ ಮಾಡುವುದೂ ಕೂಡ ಮಾಡುತ್ತಾರೆ. ಕಳೆದ ವರ್ಷ ಅವರು ಬರೆದ ಎರಡು ಪುಸ್ತಕಗಳು ಪ್ರಕಟಗೊಂಡಿವೆ. ಆ ಎರಡು ಪುಸ್ತಕಗಳು ಐತಿಹಾಸಿಕವಾಗಿ ಬಹಳ ಮಹತ್ವದ ವಿಷಯ ಸಾಮಗ್ರಿಯನ್ನು ಹೊಂದಿವೆ. ಅಲ್ಲದೆ ಆ ದಿನಗಳಲ್ಲಿ ನಡೆದ ರೈತ ಹೋರಾಟದಲ್ಲಿಯ ಒಳ ನೋಟಗಳು ಇವೆ.

೧೮೫೭ ರಿಂದ ೧೯೧೭ನೇ ಅವಧಿಯಲ್ಲಿ ನಡೆದ ರೈತರ ಪ್ರತಿಭಟನಾ ಚಳುವಳಿಗಳ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ಕೊಟ್ಟಾದ ನಂತರ ಲಾಹಿರಿಯವರು ೧೯೧೭ ರಿಂದ ೧೯೫೭ನೇ ಇಸವಿಯ ಅವಧಿಯಲ್ಲಿ ಗಾಂಧೀಜಿಯವರ ಪಾತ್ರವನ್ನು ಮೌಲ್ಯಮಾಪನ ಮಾಡುತ್ತಾರೆ. ಈ ಅಧ್ಯಾಯ ಮತ್ತು ಅದರ ಮುಂದಿನ ಅಧ್ಯಾಯ ಅಂದರೆ ೧೯೩೭ ರಿಂದ ೪೭ರ ವರೆಗಿನ ರೈತ ಹೋರಾಟಗಳನ್ನು ಕುರಿತು ಇವೆ. ನಮ್ಮ ದೇಶದ ಇತಿಹಾಸಕಾರರು ರೈತರ ಹೋರಾಟದ ಬಗ್ಗೆ ಪೂರ್ಣ ಉದಾಸೀನವಾಗಿದ್ದಾರೆಂದು ಲಾಹಿರಿಯವರು ತಮ್ಮ ದುಃಖವನ್ನು ತೋಡಿಕೊಳ್ಳುತ್ತಾರೆ. ರಾಷ್ಟ್ರೀಯ ನಾಯಕತ್ವವು ಜಮೀನ್ದಾರಿ ಪದ್ಧತಿಯಿಂದ ಪ್ರಭಾವಿತವಾಗಿತ್ತು. ರೈತರು ವಿದೇಶಿ ಆಡಳಿತ ಮತ್ತು ಜಮೀನ್ದಾರಿಕತ್ವದ ವಿರುದ್ಧ ಏಕಕಾಲಕ್ಕೆ

ಹೋರಾಟ ಮಾಡಬೇಕಾಗಿತ್ತು. ಇವೆರಡರ ಮಧ್ಯ ಸಮನ್ವಯತೆಯಿರಲಿಲ್ಲ ಹಾಗೂ ಪ್ರಭಾವಶಾಲಿ ನಾಯಕತ್ವವಿರಲಿಲ್ಲ. ಈ ಎರಡು ಪ್ರಭಾವಕಾರಿ ಶಕ್ತಿಗಳನ್ನು ಒಂದುಗೂಡಿಸುವುದರಲ್ಲಿ ಆದ ವಿಫಲತೆ ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದ ಕೊನೆಯವರೆಗೂ ಉಳಿಯಿತು. ಈ ಮೂಲಭೂತ ದೋಷದ ಕಾರಣದಿಂದಾಗಿ ಪ್ರತಿಗಾಮಿ ಶಕ್ತಿಗಳು ಕೋಮುವಾದದ ಹೆಸರಿನಲ್ಲಿ ರೈತರ ಸಂಘಟನೆಯನ್ನು ಯಶಸ್ವಿಯಾಗಿ ಮುರಿದವು. ಇದರ ಪರಿಣಾಮವಾಗಿ ನಮ್ಮ ದೇಶವು ವಿಭಜಿತಗೊಂಡಿತು. ಚಂಪಾರನ್, ಖೇಡ ಮತ್ತು ಬಾರ್ಡೋಲೀ ಹೋರಾಟಗಳಲ್ಲಿ ಬಹುಸಂಖ್ಯಾತರಾಗಿದ್ದ ರೈತರ ಮತ್ತು ಕೃಷಿ ಕಾರ್ಮಿಕರ ಶೋಷಣೆಯ ಬಗ್ಗೆ ಗಾಂಧೀಜಿ ಮತ್ತು ಕಾಂಗ್ರೆಸ್ ನಾಯಕತ್ವ ಸಂಪೂರ್ಣವಾಗಿ ಮೌನವಾಗಿತ್ತೆಂದು ಲಾಹಿರಿಯವರು ಹೇಳುತ್ತಾರೆ. ಗಾಂಧೀಜಿಯವರು ಶೋಷಣೆಯ ವಿರುದ್ಧ ಹೋರಾಟ ಮಾಡಲು ರೈತರಿಗೆ ಪ್ರೇರಣೆಯನ್ನು ಕೊಟ್ಟರು ಆದರೆ ಜಮೀನ್ದಾರರಿಗೆ ನಿಸ್ಸಂಕೋಚವಾಗಿ ಗುತ್ತಿಗೆ ಹಣವನ್ನು ಹಾಗು ಇತರೆ ಪರಂಪರಾಗತ ಶುಲ್ಕಗಳನ್ನು ಕೊಡಲು ಉಪದೇಶಿಸಿದರು. ಬ್ರಿಟಿಷರ ಆಳ್ವಿಕೆಯ ೧೫೦ ವರ್ಷಗಳ ಅವಧಿಯಲ್ಲಿ ರೈತರು ನಡೆಸಿದ ವಿವಿಧ ಹೋರಾಟಗಳ ಬಗ್ಗೆ ಲಾಹಿರಿ ಅನೇಕ ಹೊಸ ಸಂಗತಿಗಳನ್ನು ತಿಳಿಸುತ್ತಾರೆ. ಸ್ವಾತಂತ್ರ್ಯ ಬರುವ ಪೂರ್ವದಲ್ಲಿಯ ಮೊದಲಿನ ಹತ್ತು ವರ್ಷಗಳ ರೈತ ಚಳುವಳಿಯ ಇತಿಹಾಸವು ಬಹಳ ಆಸಕ್ತಿದಾಯಕವಾಗಿದೆ. ೧೯೪೨ರ ಭಾರತ ಬಿಟ್ಟು ಹೋಗಿ ಚಳುವಳಿಯ ಕಾಲದಲ್ಲಿ ಬಂಗಾಲದ ಮಿದನಾಪುರದಲ್ಲಿ ಮತ್ತು ಮಹಾರಾಷ್ಟ್ರದ ಸಾತಾರದಲ್ಲಿ ನಡೆದ ಬಂಡಾಯಗಳು ರೈತರು ಹೊಂದಿದ್ದ ಕ್ರಾಂತಿದಾಯಕ ಪಾತ್ರವನ್ನು ವ್ಯಕ್ತಪಡಿಸುತ್ತವೆ. ಕಾಂಗ್ರೇಸ್ ಪಕ್ಷದ ಇಡೀ ನಾಯಕತ್ವವು ಬಂಧಿಸಲ್ಪಟ್ಟಿದ್ದಾಗ ಗಾಂಧೀಜ ಮಾಡಿರಿ ಅಥವಾ ಮಡಿಯಿರಿ ಎಂದು ಜನಸ್ತೋಮಕ್ಕೆ ಹೇಳಿದರು. ೧೯೪೨ ರಲ್ಲಿ ನಡೆದ ರಾಷ್ಟ್ರೀಯ ಚಳುವಳಿಯೊಂದಿಗೆ ಭಾರತೀಯ ಕಮ್ಯೂನಿಸ್ಟರು ಸಂಬಂಧವನ್ನು ಹೊಂದಲು ವಿಫಲರಾದರೆಂಬುದನ್ನು ಲಾಹಿರಿಯವರು ಬೊಟ್ಟುಮಾಡಿ ತೋರಿಸಿದ್ದಾರೆ. ವ್ಯಾಪಕವಾದ ರಾಷ್ಟ್ರೀಯ ಚಳುವಳಿಯೊಂದಿಗಿನ ಕಮ್ಯೂನಿಸ್ಟರ ದೂರಾಗುವಿಕೆಯಿಂದ ಮುಸ್ಲಿಂ ಲೀಗ್ ಗ್ರಾಮಾಂತರ ಪ್ರದೇಶದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. ಇದರಿಂದಾಗಿ ಭಾರತೀಯ ರಾಜಕಾರಣ ಇನ್ನು ಹೆಚ್ಚು ಕೋಮುವಾದಕ್ಕೆ ಒಳಗಾಯಿತು. ದೇಶದ ವಿಭಜನೆಯನ್ನು ತಪ್ಪಿಸಲು ಸಾಧ್ಯವಿತ್ತೆಂಬ ಮಹತ್ವದ ಒಂದು ಮಾತನ್ನು ಲಾಹರಿ ಹೇಳುತ್ತಾರೆ. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡುತ್ತಿದ್ದ ಶಕ್ತಿಗಳು ಒಂದು ಕಡೆ, ಬ್ರಿಟಿಷ್ ಆಡಳಿತಗಾರರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪ್ರಯತ್ನ ಇನ್ನೊಂದು ಕಡೆಗೆ ಮತ್ತು ಕೋಮು ಶಕ್ತಿಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದು ಮತ್ತೊಂದು ಕಡೆ ೧೯೪೭ ಜೂನ್ ತಿಂಗಳ

ವರೆಗೂ ನಡೆದವು. ಗಾಂಧೀಜಿಯವರು ಕೊಟ್ಟ ಉಪದೇಶಕ್ಕೆ ವಿರುದ್ಧವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ದೇಶದ ವಿಭಜನೆಯನ್ನು ಒಪ್ಪಿಕೊಂಡಿತು. ೧೯೪೭ ಆಗಸ್ಟ್ ೧೪ರ ಮಧ್ಯರಾತ್ರಿಯಂದು ಸ್ವಾತಂತ್ರ್ಯವೇನೊ ಬಂತು. ಆದರೆ ಆ ಸ್ವಾತಂತ್ರ್ಯ ಬಂದುದು ಲಕ್ಷಾಂತರ ಜನರ ಹೆಣಗಳ ಮೇಲಿಂದ ಮತ್ತು ಕೋಮು ಗಲಭೆಯ ಕಾರಣದಿಂದಾಗಿ. ಭಾರತ ಮತ್ತು ಪಾಕಿಸ್ತಾನಕ್ಕೆ ನಿರಾಶ್ರಿತರಾಗಿ ಹೊರಟ ಲಕ್ಷಾಂತರ ಜನರ ಮೇಲಿಂದ ಬಂದಿತು.

ಲಾಹಿರಿಯವರ ಪುಸ್ತಕಗಳು ಜನವರಿ ೧೯೯೯ರಂದು ಕೋಲ್ಕತ್ತದಲ್ಲಿ ನಡೆದ ಪುಸ್ತಕಗಳ ಪ್ರದರ್ಶನದಲ್ಲಿ ಬಿಡುಗಡೆಗೊಂಡವು ಮತ್ತು ಆ ಪುಸ್ತಕಗಳು ಇಂಗ್ಲೀಷ್‌ನಲ್ಲಿ ಅನುವಾದಗೊಳ್ಳಬೇಕೆಂದು ಸಭಿಕರು ಅಭಿಪ್ರಾಯಪಟ್ಟರು. "ಲಾಹಿರಿಯವರ ಪ್ರಕಾರ ಭಾರತೀಯ ಕೃಷಿ ಕ್ಷೇತ್ರ ಒಂದು ಸಂಕೀರ್ಣ ಬೆಳವಣಿಗೆಯನ್ನು ಪಡೆದಿದೆ."

"ಕೃಷಿ ಪದ್ಧತಿಯಲ್ಲಿ ಬಹಳಷ್ಟು ಬದಲಾವಣೆಗಳು ಉಂಟಾಗಿವೆ. ಇಂದು ವ್ಯಾಪಾರ, ವಾಣಿಜ್ಯ ಮತ್ತು ಸಾಗಾಣಿಕೆಯಂಥ ಎಲ್ಲ ಕ್ಷೇತ್ರಗಳಲ್ಲಿ ಶ್ರೀಮಂತ ರೈತರು ಮುಂದೆ ಬರುವುದನ್ನು ಕಾಣುತ್ತೇವೆ. ವಿಧಾನಸಭೆಗಳಲ್ಲೂ ಮತ್ತು ಪಾರ್ಲಿಮೆಂಟಿನಲ್ಲಿ ಅವರು ಪ್ರವೇಶ ಪಡೆದಿದ್ದಾರೆ ೧೦ನೇ ಲೋಕಸಭೆಯ ೫೪೭ ಸದಸ್ಯರಲ್ಲಿ ೧೦೧ ಜನರು ತಾವು ವ್ಯವಸಾಯಗಾರರೆಂದು, ಇನ್ನು ೧೫೮ ಜನರು ವ್ಯವಸಾಯದ ಜೊತೆಗೆ ಇತರೆ ವೃತ್ತಿಗಳಲ್ಲಿ ತೊಡಗಿರುವುದಾಗಿ ಘೋಷಿಸಿದ್ದಾರೆ, ಇಡೀ ಲೋಕಸಭೆಯೇ ಕೃಷಿಕರ ಲೋಕಸಭೆಯಾಗಿದೆಯೆಂದೆನಿಸುತ್ತದೆ. ಆ ಪಟ್ಟಿಯಲ್ಲಿ ಬಲರಾಮ್ ಜಾಖಡ್, ಪಿ.ವಿ.ನರಸಿಂಹರಾವ್, ಶಿವರಾಜ್ ಪಾಟೀಲ್ ಎಸ್. ಮಲ್ಲಿಕಾರ್ಜುನ್, ಜಿ. ಎಂ. ಬಾಲಯೋಗಿ. ಸರ್ದಾರ್ ಬೂಟಾಸಿಂಗ್, ಜಾರ್ಜ್ ಫರ್ನಾಂಡಿಸ್, ಜಸ್ವಂತ್‌ಸಿಂಗ್, ವಿನಯ್ ಕಟಿಹಾರ್, ಕಲ್ಪನಾತ್‌ರಾಯ್, ರಾಜೇಶ್ ಪೈಲೆಟ್ ಶರತ್ ಪವಾರ ಮುಂತಾದ ಅನೇಕ ಪ್ರಸಿದ್ಧ ವ್ಯಕ್ತಿಗಳಿದ್ದಾರೆ. ಕೃಷಿಕರ ಈ ಲೋಕಸಭೆಯ ಮೇಲೆ ಕಣ್ಣು ಹಾಯಿಸಿದರೆ ಆದಾಯ ತೆರಿಗೆಯ ಕಕ್ಷೆಯೊಳಗೆ ಕೃಷಿ ಆದಾಯವನ್ನು ಸೇರಿಸಲು ಏಕೆ ಸಾಧ್ಯವಾಗಿಲ್ಲ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ. ಅಲ್ಲದೇ ಇಂದಿಗೂ ಕೂಡ ನಮ್ಮ ದೇಶದ ಜನಸಂಖ್ಯೆಯ ಒಂದನೇ ಮೂರು ಭಾಗ ಅರೆಹೊಟ್ಟೆಯಿಂದ ಬದುಕಿದೆ. ಮತ್ತು ಜನಸಂಖ್ಯೆಯ ಅರ್ಧದಷ್ಟು ಜನ ಅನಕ್ಷರಸ್ಥರಿದ್ದಾರೆ ಮತ್ತು ಒಂದನೇ ಐದು ಭಾಗದಷ್ಟು ಜನ ವಸತಿ ಹೀನರಾಗಿದ್ದಾರೆ. ನಮ್ಮ ದೇಶದ ಜನರ ಬಿಡುಗಡೆಯು ಎಲ್ಲಿಯವರೆಗೆ ಭೂಸುಧಾರಣೆಯಂಥ ವಿಷಯಗಳಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಸಾಧ್ಯವಿಲ್ಲ. ಈಗ ಅಧಿಕಾರದ ಸ್ಥಾನಗಳಲ್ಲಿ ಮತ್ತು ಶಾಸನಸಭೆಗಳಲ್ಲಿ ತಾವು ರೈತರೆಂದು ಹೇಳಿಕೊಳ್ಳುವಂಥವರು ಕೃಷಿ ಕ್ಷೇತ್ರದ ಬದಲಾವಣೆಯ ವಿಚಾರವನ್ನು ಒಪ್ಪಲಾರರು.

ಮೋನ್‌ಸ್ಟೀವ್, ಸಾಭಾರ

## ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ರವರ ಘಟಿಕೋತ್ಸವ ಭಾಷಣ

### ಮೈಸೂರು : ಮಾರ್ಚ್ ೮–೨೦೦೨

ಮೈಸೂರಿನ ಜೆ.ಎಸ್.ಎಸ್. ವೈದ್ಯಕೀಯ ಕಾಲೇಜಿನ ಘಟಿಕೋತ್ಸವದಲ್ಲಿ ಭಾಗಿಯಾಗಿರುವುದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ. ಪದವಿಯನ್ನು ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ಮತ್ತು ಅವರನ್ನು ರೂಪಿಸಿದ ಅಧ್ಯಾಪಕರಿಗೂ ನನ್ನ ಶುಭ ಹಾರೈಕೆಗಳು. ಮೈಸೂರಿನ ಜೆ. ಎಸ್. ಎಸ್. ವೈದ್ಯಕೀಯ ಕಾಲೇಜಿನ ಘಟಿಕೋತ್ಸವ ಭಾಷಣವನ್ನು ಮಾಡುವುದು ಒಂದು ವಿಶೇಷ ಗೌರವದ ಸಂಗತಿಯೆಂದು ಭಾವಿಸುತ್ತೇನೆ. ಉದಯೋನ್ಮುಖ ವೈದ್ಯರುಗಳಿಂದ ಕೂಡಿರುವ ಈ ಪರಿಸರವು ನಾನು ಇತ್ತೀಚೆಗೆ ಅನುಭವಿಸಿದ ಒಂದು ಘಟನೆಯನ್ನು ಜ್ಞಾಪಕಕ್ಕೆ ತರುತ್ತದೆ. ಕೆಲವು ತಿಂಗಳುಗಳ ಹಿಂದೆ ನಾನು ಜೈಪುರ್‌ನಲ್ಲಿರುವ ಸಂತ ಕ್ಷೇವಿಯರ್ ಶಾಲೆಗೆ ಹೋಗಿದ್ದೆ. ಅಲ್ಲಿ ಹೆಚ್ಚಾಗಿ ಇದ್ದ ಪದವಿ–ಪೂರ್ವ ವಿದ್ಯಾರ್ಥಿಗಳೊಂದಿಗೆ ನಾನು ಮಾತನಾಡುತ್ತಿದ್ದೆ. ನಾನು ಆ ಯುವ ವಿದ್ಯಾರ್ಥಿಗಳನ್ನು ಕೇಳಿದೆ. “ನಿಮ್ಮ ಕನಸೇನೆಂಬುದನ್ನು ನಾನು ತಿಳಿಯಬಹುದೆ” ಎಂದು ಕೇಳಿದೆ.? ಆಗ ಓರ್ವ ವಿದ್ಯಾರ್ಥಿನಿ ಈ ರೀತಿ ಉತ್ತರಿಸಿದಳು. “ಅಂಕಲ್, ನಾನು ಡಾಕ್ಟರ್ ಆಗಲು ಬಯಸುತ್ತೇನೆ”. “ನೀನು ಡಾಕ್ಟರ್ ಆಗಲು ಏಕೆ ಬಯಸುತ್ತಿ?” ಎಂದು ನಾನು ಅವಳನ್ನು ಕೇಳಿದೆ. ಆಗ ಅವಳು “ನಾನು ಡಾಕ್ಟರ್‌ಳಾದರೆ ನನಗೆ ಅದು ಪ್ರಸಿದ್ಧಿಯನ್ನು ತಂದುಕೊಡುತ್ತದೆ. ಬಹಳಷ್ಟು ಹಣವನ್ನು ಸಂಪಾದಿಸಬಹುದು. ಸಂಬಂಧಿಗಳು, ಸ್ನೇಹಿತರು ಮತ್ತು ಸಮಾಜವು ನನ್ನನ್ನು ಗೌರವಿಸುವುದು” ಎಂದು ಮುಂತಾಗಿ ಅವಳು ಉತ್ತರಿಸಬಹುದೆಂದು ನಾನು ನಿರೀಕ್ಷಣೆ ಮಾಡುತ್ತಿದ್ದೆ. ಆದರೆ ಅವಳ ಉತ್ತರವು ಬೇರೆಯೇ ಆಗಿತ್ತು, ವಿಶಿಷ್ಟವಾಗಿತ್ತು, ಅವಳ ಉತ್ತರ ಹೀಗಿತ್ತು. “ನಾನು ಡಾಕ್ಟರ್‌ಳಾದರೆ ಜನರ ನೋವನ್ನು ಹೋಗಲಾಡಿಸಬಹುದು”.! ಸ್ನೇಹಿತರೆ ಇದೇ ನಿಮ್ಮ ನಿಜವಾದ ಉದ್ದೇಶವಾಗಬೇಕು ಮತ್ತು ದೇವರ ಉದ್ದೇಶವು ಸಹ ಇದೇ ಆಗಿದೆ. ಮಾನವನ ಅತಿಯಾದ ದುಃಖಗಳು ಮತ್ತು ನೋವುಗಳು ವೈದ್ಯಕೀಯ ಕ್ಷೇತ್ರವನ್ನು ಕಾಡುತ್ತಿವೆ. ವೈದ್ಯಕೀಯ ಕ್ಷೇತ್ರದಲ್ಲಿರುವಂಥ ಅತ್ಯುತ್ತಮ ಸಾಮರ್ಥ್ಯವುಳ್ಳಂಥವರನ್ನೂ ಆ ಸಮಸ್ಯೆಗಳು ದಿಗಿಲುಗೊಳಿಸಿವೆ. ಯುವ ಪದವೀಧರರಾದ ನೀವು ಜೀವನದ ಯಾವುದಾದರೊಂದು ವೃತ್ತಿಯಲ್ಲಿ ಪ್ರವೇಶ ಪಡೆಯಲಿದ್ದೀರಿ. ಇಂಥ ಒಂದು ಮಹತ್ವದ ಸಂದರ್ಭದಲ್ಲಿ ನಾನು ನಿಮ್ಮೊಂದಿಗೆ ಯಾವ ವಿಚಾರವನ್ನು ಹಂಚಿಕೊಳ್ಳಬಹುದು ಎಂಬ ಬಗ್ಗೆ ಆಲೋಚಿಸುತ್ತಿದ್ದೆ. ಜ್ಞಾನ ಅತಿಯಾಗಿ

ಬೆಳೆಯುತ್ತಿರುವ ಈ ಯುಗದಲ್ಲಿ ಜಯಶೀಲರಾಗಬೇಕೆಂಬ ಹಂಬಲವಿರುವ ಜನರು ಈಗಾಗಲೇ ಸವೆದು ಹೋದ ದಾರಿಯಲ್ಲಿ ಹೋಗದೆ ಹೊಸ ದಾರಿಯನ್ನೇ ಅನುಸರಿಸಲು ಬಯಸುವರು. ಈ ರೀತಿ ಮಾಡಬೇಕಾದರೆ ಶ್ರೇಷ್ಠ ಬುದ್ಧಿಮತ್ತೆ ಬೇಕಾಗುತ್ತದೆ. ಈ ಶ್ರೇಷ್ಠ ಬುದ್ಧಿಮತ್ತೆಯು ಮೂರು ಗುಣಗಳನ್ನು ಬಯಸುತ್ತದೆ. ಈ ಮೂರೂ ಗುಣಗಳು ಶಿಕ್ಷಣದ ಅವಧಿಯಲ್ಲಿಯೂ ಮತ್ತು ವೃತ್ತಿಯಲ್ಲಿ ತೊಡಗಿದಾಗಲೂ ಅನುಭವಕ್ಕೆ ಬರುತ್ತವೆ. ಆ ಮೂರು ಗುಣಗಳೆಂದರೆ, ಒಂದು ವಿನಮ್ರತೆ: ಎರಡು ಅದಮ್ಯ ಚೇತನ ಮತ್ತು ಮೂರನೇಯದು ನಿತ್ಯ ನೂತನ ನಾಯಕತ್ವ. ಮಿತ್ರರೇ, ಈ ಮೂರೂ ಗುಣಗಳನ್ನು ಹೊಂದಿರುವ ನಿಮ್ಮನ್ನು ಒಂದು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾರ್ಪಡಿಸುವ ಜೈತ್ರ ಯಾತ್ರೆಗೆ ಕರೆದುಕೊಂಡು ಹೋಗಲು ಬಯಸುತ್ತೇನೆ.

**ವಿನಮ್ರತೆ :**

೧೯೪೭ ರಲ್ಲಿ ಸ್ವಾತಂತ್ರ್ಯೋದಯದ ಕಾಲದಲ್ಲಿ ವಿಜ್ಞಾನ, ತಾಂತ್ರಿಕತೆ, ಇತಿಹಾಸ, ರಾಜಕಾರಣ. ಕೈಗಾರಿಕೆ ಈ ಮುಂತಾದ ಕ್ಷೇತ್ರಗಳಲ್ಲಿ ಅತ್ಯುತ್ತಮವಾದ ನಾಯಕರಿದ್ದರು. ೧೮೫೭ರ ಸ್ವಾತಂತ್ರ್ಯದ ಮೊದಲ ಹೋರಾಟದ ರಾಷ್ಟ್ರೀಯತೆಯ ಫಲವಾಗಿ ಆ ನಾಯಕರು ಜನಿಸಿದ್ದರು. ನಾನು ಬಾಲಕನಾಗಿದ್ದಾಗ ನನ್ನನ್ನು ಮೋಹಿತಗೊಳಿಸಿದ ಒಂದು ಘಟನೆಯನ್ನು ನಿಮಗೆ ಹೇಳಬಯಸುತ್ತೇನೆ. ೧೯೪೭ ಆಗಸ್ಟ್ ೧೪ರ ಮಧ್ಯ ರಾತ್ರಿಯಂದು ನನ್ನ ಶಾಲೆಯ ಅಧ್ಯಾಪಕರಾಗಿದ್ದ ರೆವೆರೆಂಡ್ ಅಯ್ಯದೊರೈ ಸೋಲೋಮನ್ ನನ್ನನ್ನು ಪಂಡಿತ್ ಜವಾಹರಲಾಲ್ ನೆಹರೂರ ಭಾಷಣವನ್ನು ಕೇಳಲು ಕರೆದುಕೊಂಡು ಹೋದರು. ಮಾರನೆಯದಿನ ೧೯೪೭ ಆಗಸ್ಟ್ ೧೫ ರಂದು ನಾನೊಂದು ಅದ್ಭುತವಾದ ಅನುಭವವನ್ನು ಪಡೆದೆ. ಅತ್ಯುತ್ತಮ ಶಿಕ್ಷಣವು ಕೊಡಬಹುದಾದಂಥ ಅನುಭವ ಅದಾಗಿತ್ತು. ಭಾರತ ಸ್ವಾತಂತ್ರ್ಯ ಪಡೆಯುತ್ತಿದ್ದದು ಮತ್ತು ಪಂಡಿತ್‌ಜೀಯವರ ಭಾಷಣ. ಎರಡನೆಯದು ಮಹಾತ್ಮ ಗಾಂಧೀಜಿಯವರ ಬಗ್ಗೆ ಬಂದಂಥ ಸುದ್ದಿ; ಅದು ನನ್ನ ಮನಸ್ಸಿನಲ್ಲಿ ಗಾಢವಾಗಿ ಬೇರೂರಿದೆ. ಮಹಾತ್ಮಗಾಂಧೀ ನೌಖಾಲಿಯ ನೊಂದ ಕುಟುಂಬಗಳಿಗೆ ಸಾಂತ್ವನ ಕೊಡಲು ನಡೆದುಕೊಂಡು ಹೋಗುತ್ತಿದ್ದುದು. ಸಾಮಾನ್ಯವಾಗಿ ರಾಷ್ಟ್ರಪಿತ ಮಹಾತ್ಮಗಾಂಧಿ ಆಗಸ್ಟ್ ೧೫ ರಂದು ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಬೇಕಾಗಿತ್ತು. ಆದರೆ ಅವರು ಕೆಂಪುಕೋಟೆಯಲ್ಲಿರಲಿಲ್ಲ. ನೌಖಾಲಿಯಲ್ಲಿದ್ದರು. ಮಹಾತ್ಮಗಾಂಧಿ ನಮ್ರತೆಯ, ಉನ್ನತ ವಿಚಾರದ ಮತ್ತು ಮಾನವ ಹಿತ ಚಿಂತನೆಯ ಸಾಕಾರಮೂರ್ತಿಯಾಗಿದ್ದರು. ಒಬ್ಬ ಶಾಲಾ ಬಾಲಕನ ಮನಸ್ಸಿನ ಮೇಲೆ ಎಂಥ ಶಾಶ್ವತವಾದ ಪರಿಣಾಮ ಇದಾಗಿತ್ತು.

**ಅದಮ್ಯ ಚೇತನ :**

ಈ ಅನುಭವದ ಹಿನ್ನೆಲೆಯಲ್ಲಿ ನಾನು ಸರ್. ಸಿ. ವಿ. ರಾಮನ್‌ರವರ ಮಾತು ಗಳನ್ನು ನಿಮಗೆ ಹೇಳಲು ಇಷ್ಟ ಪಡುತ್ತೇನೆ. ಅವರು ತಮ್ಮ ೮೦ನೇ ವಯಸ್ಸಿನಲ್ಲಿ ಯುವ ಪದವೀಧರರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ಅವರು ನೀಡಿದ ಸಂದೇಶ ಈಗಲೂ ನನ್ನ ಮನದಲ್ಲಿ ಮೊಳಗುತ್ತಿದೆ. "ನನ್ನ ಮುಂದಿರುವ ಯುವಕರೇ ಮತ್ತು ಯುವತಿಯರೇ, ನೀವು ನಿಮ್ಮ ಆಸೆಯನ್ನು ಮತ್ತು ಧೈರ್ಯವನ್ನು ಕಳೆದುಕೊಳ್ಳಬೇಡಿ, ನಿಮ್ಮ ಮುಂದೆ ಇರುವ ಕರ್ತವ್ಯದ ಬಗ್ಗೆ ನೀವು ಧೈರ್ಯವಾಗಿ ಮತ್ತು ಶ್ರದ್ಧೆಯಿಂದ ನಡೆದುಕೊಂಡಲ್ಲಿ ಮಾತ್ರ ನಿಮಗೆ ಯಶಸ್ಸು ದೊರೆಯಲು ಸಾಧ್ಯ. ಭಾರತೀಯರ ಮನಸ್ಸಿನ ಗುಣಮಟ್ಟ ಯಾವುದೇ ಟ್ಯೂಟೋನಿಕ್, ನೋರ್ಡಿಕ್ ಅಥವಾ ಆಂಗ್ಲೋ-ಸಾಕ್ಸನ್ ಮನಸ್ಸಿಗಿಂತ ಕಡಿಮೆ ಗುಣಮಟ್ಟದ್ದಿಲ್ಲ. ಬಹುಶಃ ನಾವು ಭಾರತೀಯರು ಧೈರ್ಯಶಾಲಿಗಳಾಗಿಲ್ಲ. ಎಲ್ಲೆಲ್ಲೂ ಕರೆದೊಯ್ಯುವ ಬಹುದಾದಂಥ ಕಾರ್ಯಶಕ್ತಿ ನಮ್ಮಲ್ಲಿಲ್ಲ. ನಾವು ಕೀಳರಿಮೆ ಯನ್ನು ಬೆಳೆಸಿಕೊಂಡಿದ್ದೇವೆಂದು ನನಗನಿಸುತ್ತದೆ. ಇಂದು ನಾವು ಈಗ ಮಾಡ ಬೇಕಾದ ಕೆಲಸವೇನೆಂದರೆ ಈ ಕೀಳರಿಮೆಯನ್ನು ಕಿತ್ತೊಗೆಯುವುದೇ ಆಗಿದೆ, ಈಗ ನಮಗೆ ಬೇಕಾಗಿರುವುದು ಯಶಸ್ಸನ್ನು ಪಡೆಯಲು ಬೇಕಾದ ಚೇತನ, ಈ ಭೂಮಿಯ ಮೇಲೆ ಹರ್ಷದಾಯಕವಾದಂಥ ಸ್ಥಳಕ್ಕೆ ನಮ್ಮನ್ನು ಕೊಂಡೊಯ್ಯ ಬಹುದಾದಂಥ ಚೇತನ; ಈ ಭೂ ಗ್ರಹದಲ್ಲಿ ಶ್ರೇಷ್ಠ ನಾಗರಿಕತೆಯೊಂದರ ಉತ್ತರಾಧಿಕಾರಿಗಳಾದ ನಮಗೆ ಯೋಗ್ಯ ಸ್ಥಾನವನ್ನು ತಂದು ಕೊಡಬಹುದಾದಂಥ ಚೇತನ. ಇಂಥ ಅದಮ್ಯ ಚೇತನ ನಮ್ಮಲ್ಲಿ ಆವಿರ್ಭವಿಸಿದಲ್ಲಿ ನಮ್ಮ ಹಕ್ಕಿನ ಭವಿಷ್ಯವನ್ನು ಯಾರೂ ತಡೆಯಲಾರರು".

ಯುವಕರಿಗೆ ಇದೊಂದು ದೊಡ್ಡ ಮಾತು. ವಿಜ್ಞಾನ ಮತ್ತು ಸಮಾಜ ಇವುಗಳನ್ನು ಜೋಡಿಸುವ ಸೇತುವೆಯನ್ನು ನೀವು ಕಾಣುವಿರಿ. ಯುವಕರ ಭವಿಷ್ಯದ ಬಗ್ಗೆ ಹೊಣೆಗಾರಿಕೆಯಿರುವ ಎಲ್ಲರನ್ನು, ತಂದೆ-ತಾಯಿಗಳನ್ನು ಮತ್ತು ಮಕ್ಕಳ ಅಭಿವೃದ್ಧಿಗೆ ಹೊಣೆಗಾರರಾಗಿರುವವರನ್ನು ನಾನು ವಿನಂತಿಸುವುದೇನೆಂದರೆ ಯುವಕರು ಮತ್ತು ಮಕ್ಕಳು ಕನಸು ಕಾಣುವುದಕ್ಕೆ ಅವಕಾಶ ಕೊಡಿ. ಕನಸುಗಳೇ ವಿಚಾರಗಳಾಗಿ ಪರಿವರ್ತನೆಗೊಳ್ಳುತ್ತವೆ ಮತ್ತು ವಿಚಾರಗಳೇ ಕೃತಿಗಳಾಗಿ ಫಲಿಸುತ್ತವೆ.

**ಕ್ರಿಯಾಶೀಲ ನಾಯಕತ್ವ**

೧೯೭೯ ಆಗಸ್ಟ್ ೧೦ರಂದು ಮೊದಲನೆಯ ಎಸ್.ಎಲ್. ವಿ-೩ರ ಉಪಗ್ರಹದ ಪ್ರಾಯೋಗಿಕ ಉಡಾವಣೆಯನ್ನು ಮಧ್ಯಾಹ್ನ ೩ ಗಂಟೆಗೆ ನಿಶ್ಚಿತಗೊಳಿಸಲಾಗಿತ್ತು.

ನಾನು ಈ ಯೋಜನೆಯ ನಿರ್ದೇಶಕನಾಗಿದ್ದೆ. ೫೦ ಜನ ಸದಸ್ಯರ ತಂಡದೊಂದಿಗೆ SHAR ನಿಯಂತ್ರಣ ಕೊಠಡಿಯಲ್ಲಿದ್ದೆ. ನನಗೆ ನೆರವಾಗಲು ೬ ಜನ ತಜ್ಞರಿದ್ದರು. ಉಡಾವಣೆಯ ತಾಂತ್ರಿಕತೆಯ ವ್ಯವಸ್ಥೆಯಲ್ಲಿ ಯಾವುದೋ ಒಂದು ನ್ಯೂನ್ಯತೆಯ ಕಾರಣದಿಂದ ಸ್ವಯಂಚಾಲಿತ ಕಂಪ್ಯೂಟರ್ ಎಣಿಕೆ ನಿಂತುಬಿಟ್ಟಿತು. ಈ ದೋಷ ಇದ್ದಾಗ್ಯೂ ಸಹ ಉಡಾವಣೆಯ ಕಾರ್ಯಕ್ರಮವನ್ನು ಮುಂದುವರೆಸಬೇಕೆಂದು ನನ್ನೊಂದಿಗಿದ್ದ ತಜ್ಞರು ಸಲಹೆಯನ್ನು ಕೊಟ್ಟರು. ನಾನು ಅವರ ಸಲಹೆಯನ್ನು ಒಪ್ಪಿ ಕಂಪ್ಯೂಟರಿನ ಗುಂಡಿಯನ್ನು ಒತ್ತಿದೆ. ಸರಿಯಾಗಿ ಟಿ-೦ ಸಮಯಕ್ಕೆ ಎಸ್. ಎಲ್. ವಿ-೩ ಬಹಳ ಸಂಭ್ರಮವಾಗಿ ಉಡಾವಣೆಗೊಂಡಿತು. ಮೊದಲನೆಯ ಹಂತದ ಉಡಾವಣೆಯ ವೇಗ ನಿರೀಕ್ಷಿಸಿದಂತೆ ನಡೆಯಿತು. ಆದರೆ ಮುಂದೆ ಕೆಲವೇ ಕ್ಷಣಗಳಲ್ಲಿ ಎರಡನೆಯ ಮತ್ತು ಮೂರನೆಯ ಹಂತಗಳಲ್ಲಿ ಉಪಗ್ರಹವು ಎಡವುತ್ತಾ ಮುಂದೆ ಸಾಗಿದುದನ್ನು ಮತ್ತು ನಂತರ ಅದು ಬಂಗಾಳಕೊಲ್ಲಿಯಲ್ಲಿ ಕಣ್ಮರೆಯಾದುದನ್ನು ನೋಡಿದೆವು, ಆಗ ಬೆಳಗಿನ ೭ ಗಂಟೆ. ಈ ವಿಜ್ಞಾನಿಗಳ ತಂಡ ತನ್ನ ಹಗಲು ಮತ್ತು ರಾತ್ರಿಯ ಕಠಿಣ ಪರಿಶ್ರಮದ ನಂತರವೂ ಅವರು ಉಡಾವಣೆಯ ವಿಫಲತೆಯ ಕಾರಣಗಳನ್ನು ಪತ್ತೆ ಹಚ್ಚಲು ಮತ್ತು ಮಾಹಿತಿಯನ್ನು ಸಂಗ್ರಹಿಸಲು ತೊಡಗಿದರು. ಈ ಮಧ್ಯೆ ಪ್ರೊ|| ಸತೀಶ್‌ಧಾವನ್ ನನ್ನನ್ನು ಒಂದು ಪತ್ರಿಕಾ ಗೋಷ್ಠಿಗೆ ಬರಲು ಕರೆದರು. ಪತ್ರಿಕಾ ಗೋಷ್ಠಿಯ ಮೊದಲು ಧಾವನ್‌ರವರು ನನಗೆ ಈ ರೀತಿ ಹೇಳಿದರು. "ಉಡಾವಣೆಯ ವಿಫಲತೆಯ ಸಂಬಂಧವಾಗಿ ಉಂಟಾಗಿರುವ ಪರಿಸ್ಥಿತಿಯನ್ನು ತಾವು ನಿಭಾಯಿಸುವುದಾಗಿಯೂ, ನಾನು ಅನೇಕ ಹಿರಿಯ ವಿಜ್ಞಾನಿಗಳ ಜೊತೆಗೆ ಗೋಷ್ಠಿಯಲ್ಲಿ ಹಾಜರಿರಬೇಕೆಂದೂ ತಿಳಿಸಿದರು". ಪತ್ರಿಕಾ ಗೋಷ್ಠಿಯ ಕೊಠಡಿಯು ಪತ್ರಿಕಾ ಕರ್ತರಿಂದ ತುಂಬಿತ್ತು. ನಿರಾಶೆಯ ವಾತಾವರಣ ಹರಡಿತ್ತು. ಅನೇಕ ಪ್ರಶ್ನೆಗಳು ಕೇಳಲ್ಪಟ್ಟವು. ಕೆಲವು ಪ್ರಶ್ನೆಗಳಂತು ಬಹಳ ತೀಕ್ಷ್ಣವಾಗಿದ್ದವು. ಮತ್ತು ವಿಚಾರಪೂರ್ಣವಾಗಿದ್ದವು. ಮತ್ತೆ ಕೆಲವು ಟೀಕೆಗಳಿಂದ ಕೂಡಿದ್ದವು. ಪ್ರೊ|| ಧಾವನ್ ಈ ರೀತಿ ಘೋಷಣೆ ಮಾಡಿದರು, "ಸ್ನೇಹಿತರೆ, ಇದು ಉಪಗ್ರಹ ಉಡಾವಣೆಯ ನಮ್ಮ ಮೊದಲ ಪ್ರಯತ್ನವಾಗಿದೆ. ನಮಗೆ ಯಶಸ್ಸು ದೊರೆತಿಲ್ಲ. ಉಪಗ್ರಹದಲ್ಲಿ ಬಹುವಿಧ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಂಥ ಮೊದಲ ಪ್ರಯತ್ನ ಇದು. ಬೇರೆ ಪ್ರಕಾರದ ತಾಂತ್ರಿಕತೆಯ ವಿಷಯದಲ್ಲಿ ನಾವು ಜಯಶೀಲರಾಗಿದ್ದೇವೆ. ಇನ್ನು ಕೆಲವು ಪ್ರಯೋಗಗಳಲ್ಲಿ ಯಶಸ್ಸು ಪಡೆಯಬೇಕಿದೆ. ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಸಹದ್ಯೋಗಿಗಳ ಈ ತಂಡಕ್ಕೆ ಎಲ್ಲ ತಾಂತ್ರಿಕ ನೆರವನ್ನು ಕೊಡಬೇಕಾಗಿದೆ. ನಾನು ಆ ಕೆಲಸವನ್ನು ಮಾಡಲಿದ್ದೇನೆ ಮತ್ತು ಮುಂದಿನ ಪ್ರಯೋಗವು ಖಂಡಿತ ಜಯ ಪಡೆಯಲಿದೆ. ಆದ್ದರಿಂದ ಈಗ ಉಂಟಾಗಿರುವ ವಿಫಲತೆಯ ಕಾರಣಗಳನ್ನು

ವಿಶ್ಲೇಷಿಸುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ತಂಡವು ಈಗಿನ ವಿಫಲತೆಯ ಕಾರಣವನ್ನು ಪತ್ತೆ ಹಚ್ಚುವುದು".

ಇನ್ನು ನಾನು ಎಸ್. ಎಲ್. ವಿ-೩ರ ಎರಡನೆಯ ಯೋಜನೆಯ ಬಗ್ಗೆ ಹೇಳುತ್ತೇನೆ. ಅದು ೧೯೮೦ ಜುಲೈ ೧೮ ರಂದು ಬೆಳಗಿನ ಜಾವ ೬-೩೦ ಕ್ಕೆ ನೆರವೇರಿತು. ಇಡೀ ದೇಶದ ಗಮನ SHAR ಉಡಾವಣಾ ಸಂಕೀರ್ಣ ಮತ್ತು ನಿಯಂತ್ರಣ ಕೇಂದ್ರದ ಕಡೆಗೆ ಇತ್ತು. ವಿಜ್ಞಾನಿಗಳ ತಂಡ ಕೆಲಸದಲ್ಲಿ ಬಹಳ ನಿರತವಾಗಿತ್ತು. ಟಿ-೪ ನಿಮಿಷಗಳಿಂದ ಕಂಪ್ಯೂಟರ್ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಟಿ-೦ ವೇಳೆಗೆ ಉಡಾವಣೆಯಾಯಿತು. ಸುಮಾರು ೬೦೦ ಕ್ಷಣಗಳ ನಂತರ ಉಡಾವಣೆಯ ಪ್ರತಿಯೊಂದು ಹಂತವೂ, ನಾಲ್ಕನೆಯ ಹಂತವೂ ಸೇರಿ ಕರಾರುವಕ್ಕಾಗಿ ಕೆಲಸ ಮಾಡುತ್ತಿದೆಯೆಂಬುದು ನನಗೆ ತಿಳಿಯಿತು. ಎಸ್. ವಿ-೩ ವೇಗದಲ್ಲಿ ಧಾವಿಸುತ್ತಿದೆ ಮತ್ತು ಸರಿಯಾದ ಎತ್ತರದಲ್ಲಿದೆ. ಮತ್ತು ರೋಹಿಣಿ ಉಪಗ್ರಹವನ್ನು ಕಕ್ಷೆಯಲ್ಲಿ ನಿಲ್ಲಿಸುವುದೆಂದು ನಾನು ಎಲ್ಲ ನಿಯಂತ್ರಣ ಕೊಠಡಿಗಳಿಗೆ ತಿಳಿಸಿದೆ. ಆಗ ಎಲ್ಲ ಕೇಂದ್ರಗಳಿಂದ ಮತ್ತು ಅಲ್ಲಿ ನೆರದಿದ್ದ ಅತಿಥಿಗಳಿಂದ ಪ್ರೋತ್ಸಾಹದ ಕೂಗು ಕೇಳಿ ಬಂತು. ಆಗ ಒಂದು ಅತ್ಯಂತ ಮಹತ್ವದ ಸಂಗತಿ ನಡೆಯಿತು. ಪ್ರೊ. ಸತೀಶ್ ಧಾವನ್ ನನಗೆ ಪತ್ರಿಕಾ ಗೋಷ್ಠಿ ಕರೆಯಲು ಹೇಳಿದರು. "ಆ ಗೋಷ್ಠಿಯಲ್ಲಿ ನಾನು ಈ ರೀತಿ ಹೇಳಬಯಸುತ್ತೇನೆ. "ಪರಿಶ್ರಮದ ನಂತರ ಯಶಸ್ಸು ದೊರೆತರೆ ನಾಯಕನು ಆ ಯಶಸ್ಸಿನ ಶ್ರೇಯಸ್ಸನ್ನು ಗುಂಪಿನ ಸದಸ್ಯರಿಗೆ ಸಲ್ಲಿಸಬೇಕು. ಆ ಯಶಸ್ಸು ಬಂದಾಗ ನಾಯಕನು ಅದನ್ನು ತಾನು ವಹಿಸಿಕೊಳ್ಳಬೇಕು ಮತ್ತು ಗುಂಪಿನ ಸದಸ್ಯರನ್ನು ಟೀಕೆಗಳಿಂದ ರಕ್ಷಿಸಬೇಕು." ತಾಂತ್ರಿಕವಾಗಿ ಉಂಟಾಗುವ ವಿಫಲತೆಯ ನಿರ್ವಹಣೆ ಹೇಗೆ ಎಂಬ ಇಂಥ ಸುಂದರ ಶಿಕ್ಷಣವನ್ನು ನಾನು ಯಾವುದೇ ಹಾರ್ವಾರ್ಡ್ ಅಥವಾ ಬೇರೆ ಯಾವುದೇ ಮ್ಯಾನೇಜ್‌ಮೆಂಟ್ ಸಂಸ್ಥೆಗಳಲ್ಲಿಯ ಅಧ್ಯಾಪಕರು ಬರೆದ ಪುಸ್ತಕದಿಂದ ಪಡೆಯಲು ಸಾಧ್ಯವಿರಲಿಲ್ಲ. ಧಾವನ್‌ರ ಈ ವಿಚಾರವನ್ನು ಮುಖ್ಯವಾಗಿ ಈಗ ನನ್ನ ಮುಂದಿರುವ ಯುವ ಸಭಿಕರಿಗೆ ತಿಳಿಸಲು ಇಷ್ಟಪಡುತ್ತೇನೆ, ನೀವು ಮುಂದೆ ನೂರಾರು ಜನರನ್ನು ನಿರ್ವಹಿಸಲಿದ್ದೀರಿ ಮತ್ತು ಕ್ಲಿಷ್ಟಕರವಾದ ಕೆಲಸವನ್ನು ಎದುರಿಸಲಿದ್ದೀರಿ. ತಂತ್ರದಲ್ಲಿ ವಿಫಲತೆ ಉಂಟಾಗ ಬಹುದು, ಯೋಜನೆಯಲ್ಲಿ ವಿಫಲತೆ ಉಂಟಾಗಬಹುದು, ವಿಷಯ ಸಂಗ್ರಹದಲ್ಲಿ ವಿಫಲತೆ ಉಂಟಾಗಬಹುದು ಅಥವಾ ಆಡಳಿತಾತ್ಮಕವಾಗಿ ವಿಫಲತೆ ಉಂಟಾಗ ಬಹುದು ಅಥವಾ ರಾಜಕೀಯ ವ್ಯವಸ್ಥೆಯಲ್ಲಿಯೂ ಕೂಡ ವಿಫಲತೆ ಉಂಟಾಗ ಬಹುದು. ಅಂಥ ಸಂದರ್ಭಗಳಲ್ಲೆಲ್ಲಾ ವಿಫಲತೆಯ ದುಷ್ಪರಿಣಾಮ ಗುಂಪಿನ ಮೇಲೆ ಆಗದಂತೆ ಗುಂಪನ್ನು ಕೂಡಲೇ ರಕ್ಷಿಸಬೇಕು. ಅಷ್ಟೇ ಯುಕ್ತವಾಗಿ ವ್ಯಕ್ತಿಗಳ ಯಶಸ್ಸನ್ನು ಮತ್ತು ಗುಂಪಿನ ಯಶಸ್ಸನ್ನು ಸಂಭ್ರಮದಿಂದ ಆಚರಿಸ

ಬೇಕು. ಮಹಾತ್ಮಗಾಂಧೀ ತಮ್ಮ ಆತ್ಮ ಚರಿತ್ರೆಯಲ್ಲಿ ನನ್ನ [illegible] ಕುರಿತು ಈ ರೀತಿ ಹೇಳಿದ್ದಾರೆ. "ತಮ್ಮ ಸಹ ಮಾನವರ ಅವಮಾನದಲ್ಲಿ [illegible] ತಮ್ಮ ಗೌರವ ಇದೆಯೆಂದು ಹೇಗೆ ಕೆಲವರು ಭಾವಿಸುತ್ತಾರೆ ಎಂಬುದು ನನಗೆ [illegible]ಸ್ಯವಾಗಿಯೇ ಉಳಿದಿದೆ" ಇದು ಎಂಥ ಭವಿಷ್ಯ ವಾಣಿ. ಈ ಮೂರು ವಿಶಿಷ್ಟ ಗು[illegible]ನ್ನು ನೀವು ಹೊಂದಿದವರಾಗಿ ರಾಷ್ಟ್ರ ನಿರ್ಮಾಣದ ಕ್ಷೇತ್ರದಲ್ಲಿ ಪ್ರವೇಶಿಸಬೇಕೆಂಬುದು ನನ್ನ ಆಶಯವಾಗಿದೆ.

**ಜ್ಞಾನಿ ಸಮಾಜದ ಮೂಲ ಸತ್ವ :**

ಅರಿವು ಅಥವಾ ತಿಳುವಳಿಕೆಯನ್ನು ಹೊಂದಿರುವ ಸಮಾಜವೇ ಅಭಿವೃದ್ಧಿ ಹೊಂದಿದ ಭಾರತದ ಅಡಿಪಾಯಗಳಲ್ಲಿ ಒಂದಾಗಿದೆ. ಉನ್ನತಿ ಮತ್ತು ಸ್ಥಾನದ ಹಿರಿಮೆಗಳೇ ಜ್ಞಾನ ಸಂಪಾದನೆಗಾಗಿ ಪ್ರೇರಣೆಯನ್ನು ಕೊಡುತ್ತವೆ. ಆದ್ದರಿಂದ ಪ್ರಪಂಚದಲ್ಲೆಲ್ಲಾ ಜ್ಞಾನ ಸಂಪಾದನೆ ಒಂದು ಮಹತ್ವದ ಕ್ಷೇತ್ರವಾಗಿದೆ. ಜ್ಞಾನಾನುಭವವನ್ನು ಹಂಚಿಕೊಳ್ಳುವುದು ನಮ್ಮ ದೇಶದ ವಿಶಿಷ್ಟ ಸಂಸ್ಕೃತಿಯಾಗಿದೆ. ಭಾರತವು ಪ್ರಾಕೃತಿಕ ಮತ್ತು ಸ್ಪರ್ಧಾತ್ಮಕ ಅನುಕೂಲತೆಗಳನ್ನು ಹೊಂದಿರುವ ಮತ್ತು ಶ್ರೇಷ್ಠ ದರ್ಜೆಯ ಸಾಮರ್ಥ್ಯಗಳನ್ನು ಹೊಂದಿರುವ ದೇಶವಾಗಿದೆ. ಆದರೆ ಇವೆಲ್ಲವೂ ಬೇರೆ ಬೇರೆ ಕಡೆಗೆ ಪ್ರತ್ಯೇಕ ದ್ವೀಪಗಳಾಗಿ ಹಂಚಿ ಹೋಗಿವೆ. ಇವುಗಳನ್ನು ಕುರಿತಾದ ತಿಳುವಳಿಕೆ ನಮಗೆ ಸಾಲದು. ಕಳೆದ ಶತಮಾನದಲ್ಲಿ ಪ್ರಪಂಚವು ವ್ಯವಸಾಯಿಕ ಸಮಾಜದಿಂದ ಕೈಗಾರಿಕಾ ಸಮಾಜಕ್ಕೆ ಬದಲಾವಣೆಗೊಂಡಿತು. ವ್ಯವಸಾಯ ಕ್ಷೇತ್ರದಲ್ಲಿ ಪ್ರಕೃತಿ ಸಹಜವಾದ ಶ್ರಮ ಒಂದು ನಿರ್ಣಾಯಕ ಅಂಶವಾಗಿರುತ್ತದೆ. ಆದರೆ ಕೈಗಾರಿಕಾ ಸಮಾಜದಲ್ಲಿ ತಂತ್ರಜ್ಞಾನದ ನಿರ್ವಹಣೆ, ಬಂಡವಾಳ ಮತ್ತು ಶ್ರಮ ಈ ಮೂರು ಸ್ಪರ್ಧಾತ್ಮಕ ಅನುಕೂಲತೆಗಳಾಗಿವೆ. ೨೧ನೇ ಶತಮಾನದಲ್ಲಿ ಹೊಸ ಸಮಾಜವೊಂದು ರೂಪಗೊಳ್ಳುತ್ತಿದೆ. ಅಲ್ಲಿ ಬಂಡವಾಳ ಮತ್ತು ಶ್ರಮದ ಬದಲಿಗೆ ಜ್ಞಾನ ಸಂಪಾದನೆಯೇ ಆ ಸಮಾಜದ ಮೂಲ ಉತ್ಪಾದಕ ಸಂಪನ್ಮೂಲವಾಗಿದೆ. ಈಗ ಇರುವ ಜ್ಞಾನದ ದಕ್ಷ ಉಪಯೋಗದಿಂದ ಮಾತ್ರ ಸಮಗ್ರವಾದ ಶ್ರೀಮಂತಿಕೆಯನ್ನು ನಿರ್ಮಿಸಬಹುದು. ಆ ಸಮಗ್ರ ಶ್ರೀಮಂತಿಕೆ ಉತ್ತಮವಾದ ಆರೋಗ್ಯ ರಕ್ಷಣೆ, ಮೂಲಭೂತ ಸೌಕರ್ಯ ಮತ್ತು ಇನ್ನಿತರ ಸಾಮಾಜಿಕ ಅಭಿವೃದ್ಧಿಗಳನ್ನು ಒಳಗೊಂಡಿರುತ್ತದೆ.

ಈ ಜ್ಞಾನಿ ಸಮಾಜಕ್ಕೂ ಸಹ ತನ್ನದೇ ಆದ ಒಂದು ಉನ್ನತಿ ಇರುತ್ತದೆ. ಈ ಉನ್ನತಿ ಜ್ಞಾನಾರ್ಜನೆಯ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುತ್ತದಲ್ಲದೆ ಕಾಪಾಡಿಕೊಂಡೂ ಬರುತ್ತದೆ. ತಿಳುವಳಿಕೆ ಹೊಂದಿದ ಕಾರ್ಯಕರ್ತರನ್ನು ನಿರ್ಮಿಸುವುದು ಮತ್ತು ಕ್ರಿಯಾತ್ಮಕ ಅಭಿವೃದ್ಧಿಶೀಲ ಜ್ಞಾನವನ್ನು ಅವರು

ಪಡೆಯುವಂತೆ ಮಾಡುವುದು ಇತ್ಯಾದಿ ಅಂಶಗಳನ್ನು ಜ್ಞಾನಿಸಮಾಜ ಅವಲಂಬಿಸಿರುತ್ತದೆ. ಇದರಲ್ಲಿ ಜ್ಞಾನಿ ಸಮಾಜದ ಉನ್ನತಿಯು ಪ್ರಶ್ನೆ ಅಡಗಿರುತ್ತದೆ. ಜ್ಞಾನದ ನಿರ್ಮಾಣ ಮತ್ತು ಅದರ ಉಪಯೋಗವನ್ನು ದೇಶವು ಯಾವ ರೀತಿ ಪರಿಣಾಮಕಾರಿಯಾಗಿ ಉಪಯೋಗ ಮಾಡಿಕೊಳ್ಳುತ್ತದೊ ಅದರ ಮೇಲೆ ಆ ದೇಶವು ಜ್ಞಾನಿ ಸಮಾಜದ ಹಂತಕ್ಕೆ ತಲುಪಿದೆಯೇ ಹೇಗೆ ಎಂದು ನಿರ್ಧರಿಸಲಾಗುತ್ತದೆ.

ಜ್ಞಾನಿ ಸಮಾಜವು ಎರಡು ಪ್ರಮುಖ ತತ್ವಗಳನ್ನು ಹೊಂದಿರುತ್ತದೆ. ಈ ಎರಡೂ ತತ್ವಗಳಿಗೆ ಸಾಮಾಜಿಕ ಪರಿವರ್ತನೆ ಮತ್ತು ಐಶ್ವರ್ಯದ ನಿರ್ಮಾಣ ಪ್ರೇರಕವಾಗಿರುತ್ತದೆ. ಸಾಮಾಜಿಕ ಪರಿವರ್ತನೆಯು ಶಿಕ್ಷಣ, ಆರೋಗ್ಯ ರಕ್ಷಣೆ, ವ್ಯವಸಾಯ ಮತ್ತು ಆಡಳಿತ ನಿರ್ವಹಣೆ ಇವುಗಳನ್ನು ಅವಲಂಬಿಸಿರುತ್ತದೆ. ಇವುಗಳ ಕಾರಣದಿಂದಾಗಿ ಉದ್ಯೋಗದ ಸೃಷ್ಟಿ, ಗರಿಷ್ಠ ಉತ್ಪಾದನೆ ಮತ್ತು ಗ್ರಾಮೀಣ ಉನ್ನತಿ ಸಾಧ್ಯವಾಗುತ್ತದೆ. ಈ ಎಲ್ಲವನ್ನು ನಾವು ಸಾಧಿಸುವುದು ಹೇಗೆ?

ಯಾವುದೇ ಒಂದು ರಾಷ್ಟ್ರಕ್ಕೆ ಐಶ್ವರ್ಯದ ನಿರ್ಮಾಣ ಬಹಳ ಮಹತ್ವದ ಕೆಲಸವಾಗಿರುತ್ತದೆ. ಈ ಐಶ್ವರ್ಯವನ್ನು ರಾಷ್ಟ್ರೀಯ ಸಾಮರ್ಥ್ಯಗಳ ಸುತ್ತ ನಿರ್ಮಿಸಬೇಕಾಗುತ್ತದೆ. ಈ ಕುರಿತು ಆಲೋಚಿಸಲು ರಚಿಸಲಾಗಿರುವ ಕ್ರಿಯಾ ತಂಡವು ಕೆಲವು ಮೂಲ ಕ್ಷೇತ್ರಗಳನ್ನು ಗುರುತಿಸಿದ. ಆ ಮೂಲ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದೇ ಆದರೆ ನಾವು ಜ್ಞಾನಿ ಸಮಾಜದತ್ತ ಹೋಗಲು ಸಾಧ್ಯ. ಆ ಕ್ಷೇತ್ರಗಳು ಯಾವುವೆಂದರೆ: ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಬಾಹ್ಯಕಾಶ ತಂತ್ರಜ್ಞಾನ, ಹವಾಮಾನ ಮುನ್ಸೂಚನಾ ತಂತ್ರಜ್ಞಾನ, ವಿಕೋಪಗಳ ನಿರ್ವಹಣಾ ತಂತ್ರಜ್ಞಾನ, ದೂರ ಸಂಪರ್ಕ, ಔಷಧೋಪಚಾರ, ಮತ್ತು ದೂರ ಶಿಕ್ಷಣ, ಸ್ಥಾನೀಯ ಜ್ಞಾನ ಆಧಾರಿತ ದೂರ ಶಿಕ್ಷಣ ಉತ್ಪಾದನಾ ತಂತ್ರಜ್ಞಾನ, ಸೇವಾ ಕ್ಷೇತ್ರ ಮತ್ತು ಮಾಹಿತಿ ತಂತ್ರಜ್ಞಾನವೂ ಸೇರಿಕೊಂಡಂತಿರುವ ಮನೋರಂಜನಾ ತಂತ್ರ ಜ್ಞಾನ ಮುಂತಾದವುಗಳು ಮೂಲತತ್ವಗಳಾಗಿವೆ, ಸುದೈವದಿಂದ ಈ ಎಲ್ಲ ತಂತ್ರಜ್ಞಾನಗಳಲ್ಲಿ ಮಾಹಿತಿ ತಂತ್ರಜ್ಞಾನದ ಮೂಲಕ ಪರಸ್ಪರ ಸಂಬಂಧ ಏರ್ಪಡಿಸಬಹುದಾಗಿದೆ. ಯುವಕರಲ್ಲಿರುವ ಸಾಹಸ ಪೂರ್ಣ ಚೈತನ್ಯದ ಕಾರಣದಿಂದಾಗಿ ಮಾಹಿತಿ ತಂತ್ರಜ್ಞಾನವು ಈಗ ಗರಿಗೆದರಿಕೊಂಡಿದೆ. ಹೀಗೆ ಇಂಥ ಬಹುಮುಖಿ ಜ್ಞಾನಿಸಮಾಜವನ್ನು ನಿರ್ಮಿಸುವುದಕ್ಕಾಗಿ ಇವೆಲ್ಲವು ಜೊತೆಗೂಡಿ ಕೆಲಸ ಮಾಡಬೇಕಾಗುತ್ತದೆ.

### ಭಾರತ ಸಹಸ್ರಮಾನ ಉದ್ದೇಶಗಳು ೨೦೨೦

ನನ್ನ ಅಭಿಪ್ರಾಯದಲ್ಲಿ ಯಾವ ದೇಶವು ಐಶ್ವರ್ಯವನ್ನು ಉತ್ಪಾದಿಸುವ, ಮತ್ತು ಅದನ್ನು ಸಂರಕ್ಷಿಸುವ ಹಾಗೂ ಅನಂತರ ಇವೆರಡೂ ಉದ್ದೇಶಗಳನ್ನು

ನೆರವೇರಿಸುವಂಥ ಸಮಗ್ರ ರಣನೀತಿ. ತಂತ್ರಜ್ಞಾನ ಮತ್ತು ಉದ್ದೇಶಗಳನ್ನು ಯಾವ ದೇಶ ಹೊಂದಿರುತ್ತದೋ ಆ ದೇಶವೇ ಅಭಿವೃದ್ಧಿ ಹೊಂದಿದ ದೇಶವಾಗಿದೆ. ಭೂಗೋಲವನ್ನವಲಂಬಿಸಿದ ರಾಜಕೀಯ ಕ್ಷೇತ್ರದಲ್ಲಿ ತಂತ್ರಜ್ಞಾನವು ಪ್ರಮುಖ ದ್ರವ್ಯವಾಗಿದೆ ಯೆಂಬುದು ವಾಸ್ತವ ಸಂಗತಿ. ಭಾರತದ ಸಂದರ್ಭದಲ್ಲಿ ಹೇಳುವುದಾದರೆ ಆರ್ಥಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ಸಂರಕ್ಷಣೆಗಾಗಿ ತಂತ್ರಜ್ಞಾನವೇ ಕಾರ್ಯೋನ್ಮುಖ ಶಕ್ತಿಯಾಗಬೇಕಾಗಿದೆ. **ಭಾರತ ಸಹಸ್ರಮಾನ ಉದ್ದೇಶಗಳು ೨೦೨೦** (IMM-2020) ಭಾರತವನ್ನು 2020 ರ ವೇಳೆಗೆ ಬಲಿಷ್ಠ ಮತ್ತು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಲು ಶ್ರೇಷ್ಠತಮವಾದ ಒಂದು ಚೌಕಟ್ಟನ್ನೂ ಮತ್ತು ಮಾರ್ಗಸೂಚನೆಯನ್ನೂ ಒದಗಿಸುತ್ತದೆ,

ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಪರಿವರ್ತಿಸಲು ಅಗತ್ಯವಾಗಿರುವ ೫ ಮೂಲ ಸತ್ವಗಳನ್ನು ನಾವು ಗುರುತಿಸಿದ್ದೇವೆ. ಅವು ಯಾವುವೆಂದರೆ:-

೧) ವ್ಯವಸಾಯ ಮತ್ತು ಆಹಾರ ಸಂಯೋಜನೆ. ಈಗಿರುವ ಆಹಾರ ಉತ್ಪಾದನೆಯ ಗುರಿಯನ್ನು ದ್ವಿಗುಣಗೊಳಿಸುವುದು. ಇದರಿಂದಾಗಿ ಗ್ರಾಮೀಣ ಜನರ ಆರ್ಥಿಕ ಬೆಳವಣಿಗೆ ತೀವ್ರಗೊಳ್ಳುವುದು.

೨) ದೇಶದ ಎಲ್ಲ ಭಾಗಗಳಿಗೆ ಗುಣಾತ್ಮಕವಾದ ವಿದ್ಯುತ್ ಶಕ್ತಿಯನ್ನು ಸರಬರಾಜು ಮಾಡುವುದು.

೩) ಇದುವರೆಗಿನ ನಮ್ಮ ಅನುಭವದಿಂದ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ ಇವೆರಡೂ ಪರಸ್ಪರಾವಲಂಬಿತವಾಗಿವೆ ಎಂದು ತಿಳಿಯುವುದು,

೪) ಮಾಹಿತಿ ತಂತ್ರಜ್ಞಾನ ನಮ್ಮ ಮೂಲ ಸಾಮರ್ಥ್ಯವಾಗಿದೆ. ದೂರದ ಪ್ರದೇಶಗಳಲ್ಲಿ ಶಿಕ್ಷಣವನ್ನು ಬೆಳೆಸಲು ಮತ್ತು ರಾಷ್ಟ್ರೀಯ ಐಶ್ವರ್ಯವನ್ನು ಅಭಿವೃದ್ಧಿಪಡಿಸಲು ಈ ಕ್ಷೇತ್ರವನ್ನು ಉಪಯೋಗಿಸಬಹುದಾಗಿದೆ.

೫) ಆಯಕಟ್ಟಿನ ಕ್ಷೇತ್ರಗಳು :- ಅಣು ತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ರಕ್ಷಣಾ ತಂತ್ರಜ್ಞಾನ ಈ ಕುರಿತು ಅನೇಕ ಬೆಳವಣಿಗೆಗಳಾಗಿವೆ.

ಈ ಐದೂ ಕ್ಷೇತ್ರಗಳು ಪರಸ್ಪರ ಸಂಬಂಧ ಹೊಂದಿವೆ. ಮತ್ತು ೩೦ IMM 2020 ಉದ್ದೇಶಗಳತ್ತ ತೆಗೆದುಕೊಂಡು ಹೋಗುತ್ತವೆ. ಇದರಿಂದಾಗಿ ರಾಷ್ಟ್ರೀಯ ಆಹಾರ ಮತ್ತು ಆರ್ಥಿಕ ಸುಭದ್ರತೆ ಉಂಟಾಗುತ್ತದೆ. ಈ ದೂರದೃಷ್ಟಿಯ ಗುರಿಗಳನ್ನು ಸಾಧಿಸಲು ಸಂಶೋಧನೆ ಮತ್ತು ಅಭಿವೃದ್ಧಿ (R&D). ಶಿಕ್ಷಣ ಕ್ಷೇತ್ರ, ಕೈಗಾರಿಕಾ ಕ್ಷೇತ್ರ ಮತ್ತು ಸಮಾಜ ಹಾಗೂ ಸರಕಾರದ ಇಲಾಖೆಗಳೊಂದಿಗೆ ಬಲಯುತವಾದ ಭಾಗೀದಾರಿತ್ವ ಅಗತ್ಯವಾಗುತ್ತದೆ.

## ನಿರ್ಣಯಾತ್ಮಕ ಅಭಿಪ್ರಾಯ

ತಾಂತ್ರಿಕತೆಯ ಜ್ಞಾನವಿಲ್ಲದ ನಾಗರೀಕತೆ, ಸಾಂಸ್ಕೃತಿಕ ಆಧಾರವಿಲ್ಲದ ತಾಂತ್ರಿಕತೆ ಯಾವುದೆ ನೂತನ ಅರ್ಥಶಾಸ್ತ್ರವನ್ನು ರೂಪಿಸಲಾರವು. ಭಾರತವು ಶ್ರೇಷ್ಠ ನಾಗರೀಕತೆಯನ್ನು ಹೊಂದಿದೆ ಮತ್ತು ಸ್ವಾತಂತ್ರ್ಯದ ನಂತರ ತಾಂತ್ರಿಕ ಕ್ಷೇತ್ರದಲ್ಲಿ, ಬಾಹ್ಯಕಾಶ ವಿಜ್ಞಾನದಲ್ಲಿ, ರಕ್ಷಣೆ, ಅಣುಶಕ್ತಿ, ವ್ಯವಸಾಯ ಹಾಗೂ ಮಾಹಿತಿ ತಂತ್ರಜ್ಞಾನ ಈ ಮುಂತಾದ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಇವೆರಡರ ಸಂಯೋಜನೆ ಅಗಾಧವಾದ ಸಾಮರ್ಥ್ಯವನ್ನು ಹೆಚ್ಚಿಸುತ್ತಾ ಹೋಗುತ್ತದೆ.

ಸ್ನೇಹಿತರೆ, ನೀವು ಪ್ರಪಂಚದ ಸುತ್ತೆಲ್ಲಾ ಕಣ್ಣುಹಾಯಿಸಿದರೆ ಭಾರತ ಹಿಂದುಳಿದಿರುವುದೆಂದು ಭಾವಿಸಬಹುದು. ಇನ್ನೂ ಅಭಿವೃದ್ಧಿ ಹೊಂದದಿರುವ ನೂರಾರು ದೇಶಗಳಲ್ಲಿ ಒಂದೂ ಎಂದು ಭಾವಿಸಬಹುದು. ಮತ್ತು ಅಭಿವೃದ್ಧಿ ಹೊಂದಿರುವ ೮ ದೇಶಗಳ ಸಮೂಹದಲ್ಲಿ ಭಾರತ ಇಲ್ಲವಲ್ಲ ಎಂದೂ ಭಾವಿಸಬಹುದು. ಆದರೆ ಸಚೇತನ ಮನಸ್ಸುಳ್ಳ ಕೋಟ್ಯಾವಧಿ ಜನರನ್ನು ಕುರಿತು ಆಲೋಚಿಸಿರಿ. ಇದು ಬೇರೆ ಯಾವುದೇ ಸಂಪನ್ಮೂಲಕ್ಕಿಂತ ಅತ್ಯಂತ ಶಕ್ತದಾಯಕ ಸಂಪನ್ಮೂಲವಾಗಿವೆ. ಈ ಭೂಮಿಯ ಮೇಲಾಗಲೀ, ಅಂತರಿಕ್ಷದಲ್ಲಾಗಲೀ, ಪಾತಾಳದಲ್ಲಾಗಲೀ, ಇರಬಹುದಾದ ಯಾವುದೇ ಸಂಪನ್ಮೂಲಕ್ಕಿಂತ ಬಲಿಷ್ಠ ಸಂಪನ್ಮೂಲವಾಗಿದೆ ಇದು. ನಿಮ್ಮ ಶ್ರಮವೇ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಪರಿವರ್ತಿಸಲು ಸಾಧ್ಯ. ನಾವು ಇಂಥ ಅಭಿವೃದ್ಧಿ ಹೊಂದಿದ ದೇಶಕ್ಕಾಗಿ ಚಳುವಳಿ ಪ್ರಾರಂಭಿಸೋಣ ಮತ್ತು ಆ ಉದ್ದೇಶಕ್ಕಾಗಿ ಕೆಲಸ ಮಾಡೋಣ. ✪

ಅನು : ಸುರೇಂದ್ರ ಕೌಲಗಿ

## ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

## “ಸಮರ ಸಮಯದಲ್ಲಿ ಗ್ರಾಮಗಳೇ ಕೋಟೆಗಳಾಗಬೇಕು! ಜಯಪ್ರಕಾಶರ ಸಂಪೂರ್ಣಕ್ರಾಂತಿಯ ಆಶಯ.”

**– ಸುರೇಂದ್ರಕೌಲಗಿ**

ದೇಶದ ಉತ್ತರ ಗಡಿಯಲ್ಲಿ ಭಾರತ-ಪಾಕ್ ಯುದ್ಧದ ಕಾರ್ಮೋಡಗಳು ಮುತ್ತಿವೆ. ಗಡಿಯಲ್ಲಿ ಬಹಳ ಆತಂಕದ ಮತ್ತು ಗಂಭೀರ ವಾತಾವರಣವಿದೆ. ಯಾವ ಘಳಿಗೆಯಲ್ಲಾದರೂ ಯುದ್ಧ ಪ್ರಾರಂಭವಾಗಬಹುದು. ಭಾರತದ ಸೈನ್ಯ ಗಡಿಯುದ್ಧಕ್ಕೂ ಯುದ್ಧ ಸನ್ನದ್ಧತೆಯಲ್ಲಿದೆ. ದೇಶದ ಪ್ರಧಾನಿ ಹಾಗೂ ರಕ್ಷಣಾಮಂತ್ರಿ ಗಡಿ ಪ್ರದೇಶದಲ್ಲಿ ಪ್ರವಾಸ ಕೈ ಗೊಂಡು ಸೈನಿಕರಲ್ಲಿ ಸ್ಥೈರ್ಯ ಹಾಗೂ ಧೈರ್ಯ ತುಂಬುತ್ತಿದ್ದಾರೆ. ಮತ್ತು ಇಡೀ ದೇಶವೇ ಅವರಿಗೆ ಬೆಂಗಾವಲಾಗಿ ನಿಂತಿದೆ ಎಂಬ ಮಾತನ್ನು ಹೇಳಿಸುತ್ತಿದ್ದಾರೆ. ರಕ್ಷಣಾ ಖಾತೆಯ ಉನ್ನತ ಅಧಿಕಾರಿಗಳು ಅಮೇರಿಕಾಕ್ಕೆ ಹೋಗಿದ್ದಾರೆ. ಪಾಕಿಸ್ತಾನವು ಭಾರತ ವಿರುದ್ಧ ಸಾರಿರುವ ಅಘೋಷಿತ ಯುದ್ಧದ ಬಗ್ಗೆ ಅದಕ್ಕೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ಭಾರತ ತನ್ನ ಸಹನೆಯನ್ನು ಕಳೆದುಕೊಂಡಿದೆ; ಗಡಿಯಾಚೆಯಿಂದ ನಡೆಸುತ್ತಿರುವ ದಾಳಿಯನ್ನು ಪಾಕ್ ಕೂಡಲೇ ನಿಲ್ಲಿಸದಿದ್ದರೆ ಭಾರತವು ಪಾಕ್ ವಿರುದ್ಧ ನಿರ್ಣಾಯಕ ಹಾಗೂ ಅಂತಿಮ ಕ್ರಮಕೈಗೊಳ್ಳಬೇಕಾಗುತ್ತದೆಂದು ಸ್ಪಷ್ಟವಾದ ಮಾತುಗಳನ್ನು ಅಮೇರಿಕಾಕ್ಕೆ ತಿಳಿಸುತ್ತಿದ್ದಾರೆ. ಗುಜರಾತ್‌ನಲ್ಲಿ ಕಳೆದ ಒಂದು ತಿಂಗಳಿಂದ ಕೋಮು ಗಲಭೆಗಳನ್ನು ಹತ್ತಿಕ್ಕುವ ಕೆಲಸದಲ್ಲಿ ತೊಡಗಿದ್ದ ಸುಮಾರು ಮೂರು ಸಾವಿರ ಸೈನಿಕರನ್ನು ಅಲ್ಲಿಂದ ಕದಡಿರುವ ಗಡಿಗೆ ಕಳುಹಿಸಲಾಗಿದೆ. ರಜೆ ಮೇಲೆ ಇರುವ ಸೈನಿಕರನ್ನೂ, ಸೈನ್ಯಾಧಿಕಾರಿಗಳನ್ನೂ ಯುದ್ಧ ಸೇವೆಗೆ ತುರ್ತಾಗಿ ಕರೆಸಿಕೊಳ್ಳಲಾಗಿದೆ. ರಶಿಯಾದಿಂದ ಖರೀದಿಸಲಾಗಿದ್ದ ಮಿಗ್ ವಿಮಾನಗಳನ್ನು ಯುದ್ಧ ಸನ್ನದ್ಧ ಮಾಡಲಾಗಿದೆ. ಕ್ಷಿಪಣಿಗಳು ಹಾರಲು ತಯಾರಾಗಿ ನಿಂತಿವೆ. ಪಾಕಿಸ್ತಾನವು ಗಡಿಬಳಿಯಿರುವ ಹಳ್ಳಿಗಳ ಮೇಲೆ ಗುಂಡು ಸುರಿಸುತ್ತಿರುವುದು: ಅಲ್ಲಿಯ ಜನ ಭಾರತಕ್ಕೆ ಸುರಕ್ಷಿತ ಸ್ಥಳಕ್ಕೆ ಧಾವಿಸುತ್ತಿದ್ದಾರೆ. ಈಗಾಗಲೇ ಇಂಥವರ ಸಂಖ್ಯೆ ೫ ಸಾವಿರ ತಲುಪುತ್ತಿವೆ. ಸಂಭವಿಸಬಹುದಾದ ಯುದ್ಧದಲ್ಲಿ ಪಾಲ್ಗೊಳ್ಳಲು ವಾಯುಸೇನೆ, ನೌಕಾ ಸೇನೆಗಳು ಸಿದ್ಧವಾಗಿ ನಿಂತಿವೆ. ನಮ್ಮ ದೇಶದ ವ್ಯಾಪಾರ ವಹಿವಾಟಿನ ಮೇಲೆ ಈಗಾಗಲೇ ಯುದ್ಧದ ಭೀತಿಯ ಪರಿಣಾಮ ಉಂಟಾಗಿದೆ. ಭಾರತದ ಐದು ಲಕ್ಷಕ್ಕೂ ಹೆಚ್ಚು ಜನ ಸೈನಿಕರು ಈ ಯುದ್ಧದಲ್ಲಿ ಭಾಗವಹಿಸುವರು. ಹಿಮಾಲಯದಂಥ ಅತ್ಯಂತ ಎತ್ತರವಾದ ಕಡಿದಾದ ಹಾಗೂ ಹಿಮಾಚ್ಛಾದಿತ ಗಡಿ ಪ್ರದೇಶವನ್ನು ನಮ್ಮ ಸೈನ್ಯ ಹಗಲೂ-

ಇರುಳೂ ಅತ್ಯಂತ ಕಷ್ಟಕರವಾದ ಸನ್ನಿವೇಶದಲ್ಲಿ ರಕ್ಷಣೆ ಮಾಡುತ್ತಿದೆ. ಇದು ಭಾರತಪಾಕ್ ಗಡಿಯ ಇಂದಿನ ಪರಿಸ್ಥಿತಿ ಯುದ್ಧ ಪ್ರಾರಂಭವಾದರೆ ಇಡೀ ದೇಶದ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಚಿತ್ರವೇ ಬದಲಾಗುತ್ತದೆ. ದೇಶದ ಪ್ರತಿಯೊಬ್ಬ ನಾಗರಿಕನು ಸೈನಿಕನಾಗಿ ಪರಿವರ್ತನಾಗಬೇಕಾಗುತ್ತದೆ. ತಾನು ಮಾಡುವ ಎಲ್ಲ ಕೆಲಸವನ್ನು ಸೈನಿಕನ ರೀತಿಯಲ್ಲಿ ಕರಾರುವಾಕ್ಕಾಗಿ ಮಾಡಬೇಕಾಗುತ್ತದೆ. ಅವನು ನೀತ ಸ್ಥಳ, ಇರುವ ಮನೆಯೋ-ಗ್ರಾಮವೇ ಕೋಟೆಗಳಾಗಬೇಕಾಗುತ್ತದೆ ಭಾರತ-ಪಾಕ್ ಗಡಿಯಲ್ಲಿರುವ ಪಂಜಾಬ್ ರಾಜ್ಯದ ಗ್ರಾಮಗಳಲ್ಲಿಯ ಜನರು ಯುದ್ಧನಡೆಯುವ ಸನ್ನಿವೇಶ ಇದ್ದರೂ ತಮ್ಮ ಊರುಗಳನ್ನು ಬಿಟ್ಟು ಬರಲು ಸಿದ್ಧರಿಲ್ಲ; ಭಾರತೀಯ ಸೈನಿಕರಿಗೆ ಯುದ್ಧದ ಕಾಲದಲ್ಲಿ ಸಹಾಯ ಮಾಡಿಕೊಂಡು ತಮ್ಮ-ತಮ್ಮ ಗ್ರಾಮಗಳಲ್ಲಿಯೇ ಇರುವುದಾಗಿ ಅವರು ಹೇಳುತ್ತಿದ್ದಾರೆ! ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಗ್ರಾಮಗಳನ್ನು ತೊರೆದು ಹೋಗುವುದು ದೇಶದ್ರೋಹಕ್ಕೆ ಸಮ ಎಂದು ಅವರು ಭಾವಿಸುತ್ತಿದ್ದಾರೆ.

ಯುದ್ಧದ ಸಮಯದಲ್ಲಿ ಗಡಿಭಾಗದಲ್ಲಿ ಅಂದರೆ ಮುಂಚೂಣಿಯಲ್ಲಿ ಮೊದಲ ಸುತ್ತಿನಲ್ಲಿ ರಕ್ಷಣಾ ಪಡೆ ಇದ್ದರೆ, ಎರಡನೇ ಸುತ್ತಿನಲ್ಲಿ ಸೈನಿಕರಿಗೆ ಬೆಂಬಲವಾಗಿ ನಿಲ್ಲುವ ನಾಗರೀಕರ ಪಡೆ ಇರುತ್ತದೆ ಮತ್ತು ಮೂರನೇ ಸುತ್ತಿನಲ್ಲಿ ಗ್ರಾಮಗಳಿರುತ್ತವೆ.

ನಮ್ಮ ಈ ವಿಶಾಲ ದೇಶದ ತುಂಬೆಲ್ಲ ೬ ಲಕ್ಷಕ್ಕೂ ಹೆಚ್ಚು ಗ್ರಾಮಗಳಿವೆ ದೇಶದ ೧೦೦ ಕೋಟಿ ಜನಸಂಖ್ಯೆಯಲ್ಲಿ ೮೦ ಕೋಟಿ ಜನರು ಈ ಗ್ರಾಮಗಳಲ್ಲಿ, ನಗರಗಳಲ್ಲಿ ವಾಸವಾಗಿದ್ದಾರೆ. ದೇಶದ ಜನರಿಗೆ ಹಾಗೂ ಸೈನಿಕರಿಗೆ ಅಗತ್ಯವಾಗಿ ಬೇಕಾಗುವ ಆಹಾರವನ್ನು ಈ ಗ್ರಾಮಗಳಲ್ಲಿಯ ಜನರೇ ಬೆಳೆದು ಕೊಡುತ್ತಾರೆ. ದೇಶದ ಕಾರ್ಖಾನೆಗಳಿಗೆ ಬೇಕಾಗುವ ಕಚ್ಚಾ ಪದಾರ್ಥಗಳನ್ನು ಅವರೇ ಬೆಳೆದು ಕೊಡುತ್ತಾರೆ. ಆದ್ದರಿಂದಲೇ ಗ್ರಾಮಗಳು ದೇಶದ ಬೆನ್ನೆಲುಬು ಎಂದೆಲ್ಲ ಹೇಳಲಾಗುತ್ತದೆ. ಅಷ್ಟೇ ಅಲ್ಲ, ದೇಶದ ರಕ್ಷಣೆಯಲ್ಲಿ ಸೈನಿಕನ ಪಾತ್ರ ಎಷ್ಟು ಹಿರಿದಾಗಿದೆಯೋ, ಅಷ್ಟೇ ಹಿರಿಯ ಪಾತ್ರ ಒಬ್ಬ ರೈತನದೂ ಆಗಿದೆ. ಇದನ್ನು ತಿಳಿಸಿದ ಲಾಲ್ ಬಹಾದ್ದೂರ್‌ಶಾಸ್ತ್ರಿ ಅವರು "ಜೈ ರೈತ್, ಜೈ ಸೈನಿಕ" ಎಂಬ ಘೋಷಣೆಯನ್ನು ದೇಶಕ್ಕೆ ಕೊಟ್ಟರು. ಈ ಘೋಷಣೆಯನ್ನು ಅವರು ಕೊಟ್ಟಿದ್ದು ಭಾರತ್-ಚೀನಾ ಯುದ್ಧದ ಸಮಯದಲ್ಲಿ

ಪಂಡಿತ ಜವಾಹರಲಾಲ್‌ನೆಹರೂ ಸುಮಾರು ಹದಿಮೂರು ವರ್ಷಗಳ ಕಾಲ ಪ್ರಧಾನ ಮಂತ್ರಿಯಾಗಿದ್ದರು. ಇಡೀ ದೇಶ ಅವರನ್ನು ಬಹಳವಾಗಿ ಅವಲಂಬಿಸಿತ್ತು. ಆದ್ದರಿಂದ ಆಗಾಗ್ಗೆ "ನೆಹರೂ ನಂತರ ಯಾರು?" ಎಂಬ ಪ್ರಶ್ನೆಯನ್ನು ಕೇಳಲಾಗುತ್ತಿತ್ತು ಆ ಪ್ರಶ್ನೆಗೆ ಉತ್ತರವಾಗಿ "ಗ್ರಾಮ ಪಂಚಾ

ಯಾತಿಗಳೇ ನೆಹರೂರ ಉತ್ತರಾಧಿಕಾರಿ ಎಂದು" ಹೇಳಲಾಗುತ್ತಿತ್ತು. ಏಕೆಂದರೆ ನೆಹರೂ ಗ್ರಾಮ ಪಂಚಾಯಿತಿಗಳಿಗೆ ದೇಶ ಪುನರ್ ನಿರ್ಮಾಣಕಾರ್ಯದಲ್ಲಿ ಬಹಳ ಮಹತ್ವವನ್ನು ಕೊಟ್ಟಿದ್ದರು.

ದೇಶದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹೇಗೋ ಹಾಗೆಯೇ ಯುದ್ಧ ಕಾಲದಲ್ಲಿ ಮತ್ತು ಶಾಂತಿಕಾಲದಲ್ಲಿ ಕೂಡ ಗ್ರಾಮಗಳ ಪಾತ್ರ ಹಿರಿದಾಗಿದೆ ಎಂಬ ವಿಚಾರ ಗಾಂಧೀ-ವಿನೋಬಾ ಜೆ.ಪಿ. ಅವರ ಮೂಲಕ ಇಂದಿನ ವರೆಗೂ ಹರಿದುಕೊಂಡು ಬಂದಿದೆ.

ಈಗ ಪುನಃ ದೇಶವು ಯುದ್ಧದ ಸುಳಿಗೆ ಸಿಕ್ಕಿಕೊಳ್ಳಲಿದೆ. ಆದ್ದರಿಂದ ಸಹಜವಾಗಿ ದೇಶದ ರಕ್ಷಣೆ, ಭದ್ರತೆ ಮತ್ತು ಐಕ್ಯತೆಯತ್ತ ಗಮನ ಹೋಗುತ್ತದೆ.

ಯುದ್ಧದ ಇಂದಿನ ಸನ್ನಿವೇಶದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಬೇಕಾಗಿರುವುದು ಐಕ್ಯತೆ, ನಮ್ಮ ದೇಶದಲ್ಲಿ ಅನೇಕ ಧರ್ಮಗಳಿವೆ, ಜಾತಿಗಳಿವೆ, ಭಾಷೆಗಳಿವೆ, ರೀತಿ ನೀತಿಗಳಿವೆ ಆದ್ದರಿಂದ ನಮ್ಮ ದೇಶದಲ್ಲಿ ಒಂದು ನಾಗರೀಕತೆ ಉಂಟಾಗ ಬೇಕಾಗಿರುವುದು ಇಂದಿನ ಕಾಲ ಸ್ಥಿತಿಯಲ್ಲಿ ಬಹಳ ಅಗತ್ಯವಾಗಿದೆ. ಆದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗಿ ಹೋದರೂ ದೇಶದಲ್ಲಿ ಒಂದು ನಾಗರೀಕತೆಯ ಮನೋಭಾವ ಮೂಡಿಲ್ಲ. ಸರ್ವೋದಯ ಸಿದ್ಧಾಂತದ ಹಿರಿಯ ಚಿಂತಕರಾದ ದಾದಾ ಧರ್ಮಾಧಿಕಾರಿಯವರ ಪ್ರಕಾರ ಇಂದು ನಮ್ಮ ದೇಶದಲ್ಲಿ ಒಂದು ಪ್ರಕಾರದ್ದಲ್ಲ, ನಾಲ್ಕು ಪ್ರಕಾರದ ನಾಗರಿಕತ್ವಗಳನ್ನು ಕಾಣಬಹುದು. ಒಂದು ಸಾಂಪ್ರದಾಯಿಕ ನಾಗರಿಕತ್ವ, ಎರಡು ಸಾಮಾಜಿಕ ನಾಗರಿಕತ್ವ. ಮೂರು. ಎರಡನೇ ದರ್ಜೆಯ ನಾಗರಿಕತ್ವ, ನಾಲ್ಕು ಆಂಶಿಕ ನಾಗರಿಕತ್ವ, ಈ ರೀತಿ ತುಂಡು ತುಂಡಾದ ನಾಗರಿಕತ್ವ ಇಲ್ಲವಾಗಿದೆ. ಆದ್ದರಿಂದಲೇ ನಮ್ಮ ದೇಶದಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ಭಾಷೆ, ಜಾತಿ, ಧರ್ಮ ಮುಂತಾದವುಗಳ ಹೆಸರಿನಲ್ಲಿ ಘರ್ಷಣೆಗಳು ನಡೆಯುತ್ತಲೇ ಬಂದಿವೆ. ಇದುವರೆಗೂ ದೇಶದ ಆಗಸದಲ್ಲಿ ಯುದ್ಧದ ಕಾರ್ಮೋಡಗಳು ಕಾಣಿಸಿರಲಿಲ್ಲ, ಈಗ ಅವು ಕಾಣಿಸಿಕೊಂಡಿವೆ ಆದ್ದರಿಂದ ಈಗ ದೇಶದ ರಕ್ಷಣೆಯ ಎರಡನೇ ಸುತ್ತಿನ ರಕ್ಷಣಾ ನೀತಿಯಾಗಿ ದೇಶದಲ್ಲಿ ತುರ್ತಾಗಿ ಒಂದು ನಾಗರಿಕತ್ವವನ್ನು ಜನತೆ ಸ್ಥಾಪಿಸಿಕೊಳ್ಳಬೇಕು ಇಂಥ ಅಖಂಡ ಭಾರತೀಯ ನಾಗರಿಕತೆ ಸ್ಥಾಪನೆಯಾಗಬೇಕಾದರೆ ಗ್ರಾಮ ಗ್ರಾಮಗಳಲ್ಲಿ ಸಾಂಸ್ಕೃತಿಕ ಕ್ರಾಂತಿ ಅಂದರೆ ಗ್ರಾಮಗಳಲ್ಲಿರುವ ಜಾತಿಭೇದ ವಿನಾಶ ಒಂದು ಪ್ರಮುಖವಾದ ಹೆಜ್ಜೆಯಾಗುತ್ತದೆ. ಮಾನಸಿಕವಾಗಿ ಸಮಾನತೆಯ ಭಾವವನ್ನು ಅಂಗೀಕರಿಸುವುದಾಗಿರುತ್ತದೆ. ದೇಶದ ಐಕ್ಯತೆಗೆ ಪೂರಕವಾಗುವಂಥ ಗ್ರಾಮಗಳನ್ನು ನಿರ್ಮಿಸಬೇಕು, ದೇಶದ ಆರ್ಥಿಕೋನ್ನತಿಗೆ ಆಧಾರಸ್ತಂಭವಾಗಬಲ್ಲಂಥ

ಗ್ರಾಮಗಳನ್ನು ನಿರ್ಮಿಸಬೇಕು ಎಂಬುದು ಜಯಪ್ರಕಾಶ್ ನಾರಾಯಣರ ಸಂಪೂರ್ಣಕ್ರಾಂತಿಯ ಒಂದು ಮಹತ್ವದ ಆಶಯವಾಗಿತ್ತು. ಆದ್ದರಿಂದಲೇ ಗ್ರಾಮ ನಿರ್ಮಾಣದ ಕಾರ್ಯದಲ್ಲಿ ಅವರು ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದರು. ಬಿಹಾರ್ ರಾಜ್ಯದ ಮುನಹರಿ ಎಂಬ ಗ್ರಾಮೀಣ ಪ್ರದೇಶದಲ್ಲಿ ಜಯಪ್ರಕಾಶರು ಹಲವಾರು ತಿಂಗಳು ಗ್ರಾಮ ನಿರ್ಮಾಣದ ಕೆಲಸ ಮಾಡಿದರಷ್ಟೇ ಅಲ್ಲ "ಗ್ರಾಮ ನಿರ್ಮಾಣ ಮಂಡಲ" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಗಯಾ ಜಿಲ್ಲೆಯಲ್ಲಿ ಗ್ರಾಮ ನಿರ್ಮಾಣದ ಕೆಲಸಕ್ಕೆ ಒಂದು ಸ್ಥಾಯೀರೂಪಕೊಟ್ಟರು. ನಂತರ ೧೯೫೪ರ ರಿಂದ ೧೯೭೪ರ ವರೆಗೂ ಅಂದರೆ ೨೦ ವರ್ಷಗಳ ಕಾಲ ಸತತವಾಗಿ ಗ್ರಾಮಗಳ ಪುನರ್ ರಚನೆಯ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರು.

ಈಗ ದೇಶದ ಬಾಗಿಲಿಗೆ ಯುದ್ಧ ಬಂದು ನಿಂತಿರುವಾಗ ದೇಶದ ಎಲ್ಲ ೬ ಲಕ್ಷ ಗ್ರಾಮಗಳೂ ಕೋಟೆಗಳಾಗಿ ನಿರ್ಮಾಣಗೊಳ್ಳಬೇಕು. ಭಯೋತ್ಪಾದನೆ ಮತ್ತು ಧಾರ್ಮಿಕ ಮೂಲಭೂತವಾದದ ಹೆಸರಿನಲ್ಲಿ ಕಳೆದ ಐವತ್ತು ವರ್ಷಗಳಿಂದ ಅವ್ಯಾಹತವಾಗಿ ನಮ್ಮ ದೇಶದ ಹಿತಕ್ಕೆ ಮಾರಕವಾಗಿರುವ ಪಾಕಿಸ್ತಾನದ ವಿರುದ್ಧ ನಿರ್ಣಾಯಕವಾದ ಯುದ್ಧ ಪ್ರಾರಂಭವಾಗುತ್ತಿರುವ ಈ ವೇಳೆಯಲ್ಲಿ ಗ್ರಾಮಗಳು ಮತ್ತು ಗ್ರಾಮಗಳಲ್ಲಿರುವ ಯುವಕರು ಸಂಪೂರ್ಣ ಕ್ರಾಂತಿಯ ಕೆಲಸವನ್ನು ಕೈಗೆತ್ತಿಕೊಂಡು ರಾಷ್ಟ್ರರಕ್ಷಣೆಯಂಥ ಮಹತ್ತರವಾದ ಕೆಲಸದಲ್ಲಿ ತೊಡಗಲಿ. ಭಾವಿ ಇತಿಹಾಸ ಯುವಕರದಾಗಲಿ. ★

ಭಯೋತ್ಪಾದನೆ ಮತ್ತು ಕಾಶ್ಮೀರ : ೭ನೇ ಪುಟದಿಂದ ಮುಂದುವರಿದಿದೆ

ಇನ್ನೂ ಮೂರನೆಯದು ಸಾಂಸ್ಕೃತಿಕ ತಂತ್ರ - ಅಂದರೆ ಕೋಮು ಸೌಹಾರ್ದತೆಯ ತಂತ್ರ; ಕಾಶ್ಮೀರದಲ್ಲಿರುವ ಮುಸ್ಲಿಂರಿಗೆ ಭಾರತದಲ್ಲಿ ತಮಗೆ ಬಹಳ ಹೆಚ್ಚಿನ ರಕ್ಷಣೆ ಇದೆ ಹಾಗೂ ಧಾರ್ಮಿಕ ಸ್ವಾತಂತ್ರ್ಯವಿದೆ ಎಂಬ ಭಾವನೆ ಬೇರೂರುವಂತೆ ಮಾಡುವುದರ ಮೂಲಕ ಅವರ ಮಾನಸಿಕ ಹಾಗೂ ಹೃದಯ ಪರಿವರ್ತನೆಗಾಗಿ ಪ್ರಯತ್ನಿಸಬೇಕು, ಅಲ್ಲದೆ, ಅಲ್ಲಿಯ ಜನರ ಆಶೋತ್ತರಗಳು ನೆರವೇರಲು ಸಾಧ್ಯವಾಗುವಂತೆ ಭಾರತ ಗಣರಾಜ್ಯದಲ್ಲಿ ಕಾಶ್ಮೀರ್ ಒಂದು ಸ್ವಯಮಾಡಳಿತ ಪ್ರದೇಶವಾಗಿರುವಂತೆ ಮಾಡುವುದರ ಮೂಲಕ ಕಾಶ್ಮೀರದಲ್ಲಿಯ ಜನತೆಯ ನಿಷ್ಠೆಯನ್ನು ಭಾರತದ ಪರವಾಗಿ ತಿರುಗಿಸಿಕೊಳ್ಳಲು ಪ್ರಯತ್ನಿಸುವ ಕೆಲಸಕೂಡ ನಡೆಯಬೇಕು.

ಹೀಗೆ ಭಯೋತ್ಪಾದನೆಯನ್ನು ಯುದ್ಧದ ಮೂಲಕವೂ, ಕಾಶ್ಮೀರ ಸಮಸ್ಯೆಯನ್ನು ವಿವಿಧ ತಂತ್ರ ಹಾಗೂ ಸಂಧಾನಗಳ ಮೂಲಕವೂ ಪರಿಹರಿಸುವ ಪ್ರಯತ್ನ ಮಾಡಬೇಕು. ★

KA-SKMND-470/-2000. ಶರದ_ಅಂಚೆ

Regd No. KAR/KAN/2000/3820

Vol 2 Issue 9.

Janapada Vichara - Kannada Monthly Digest Edited Printed and Published by Surendra Koulagi at Janapada Seva Trust Printing Press. Melkote on behalf of Janapada Seva Trust. (Regd) Melkote. Dist - Mandya 571 431.

Phone : 08236/48754